# ಅನಂತಪಥ

ANANTHKUMAR PRATISHTHANA

ಸಂಪುಟ - 2 ಜೂನ್ - 2022 ಸಂಚಿಕೆ - 24




370 ನೇ ವಿಧಿಯ ರದ್ದತಿಯ ನಂತರ
ಕಾಶ್ಮೀರದಲ್ಲಿ ವಿಕಾಸ ಪರ್ವ
ಶ್ರೀ ವಿ. ಮುರಳೀಧರನ್ ಪುಟ 3

# “ಅದಮ್ಯ ಚೇತನ: ಆದರ್ಶಪ್ರಾಯ ಸಂಸ್ಥೆ”




-ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ



ಈ ಜಗತ್ತನ್ನು ಸೃಷ್ಟಿಸಿದ ಭಗವಂತ ಇಲ್ಲಿನ ಪ್ರತಿಯೊಂದು ಜೀವಿಗೂ ಅದರ ಜೀವನ ನಿರ್ವಹಣೆಗೆ ಬೇಕಾದ ವ್ಯವಸ್ಥೆಯನ್ನೂ ಮಾಡಿದ್ದಾನೆ. ಉದಾಹರಣೆಗೆ, ಮನುಷ್ಯನಿಗೆ ತನ್ನ ಜೀವನ ನಿರ್ವಹಣೆಗೆ ಬೇಕಾದ ವ್ಯವಸ್ಥೆಯನ್ನು ಭಗವಂತ ಮಾಡಿದ್ದಾನೆ. ಕಾಡಿನ ಯಾವುದೋ ಮೂಲೆಯಲ್ಲಿ ಬದುಕುತ್ತಿರುವ ಪ್ರಾಣಿಗಳಿಗೂ ಜೀವನ ನಿರ್ವಹಣೆಗೆ ಸೂಕ್ತ ವ್ಯವಸ್ಥೆಯಿದೆ. ಆಳ ಸಮುದ್ರದಲ್ಲಿ ನೀರಿನೊಳಗೆ ಬದುಕುತ್ತಿರುವ ಜಲಚರಗಳಿಗೂ ಸೂಕ್ತವಾದ ಶರೀರರಚನೆಯನ್ನೂ ಆಹಾರ ವ್ಯವಸ್ಥೆಯನ್ನೂ ಭಗವಂತ ಮಾಡಿದ್ದಾನೆ. ಈ ರೀತಿಯಾಗಿ, ಎಲ್ಲ ಪ್ರಾಣಿಗಳಿಗೂ ಜೀವನ ನಿರ್ವಹಣೆಯ ವ್ಯವಸ್ಥೆಯಾಗಿ ಒಂದು ವಿಶೇಷವಾದ ಪ್ರಕೃತಿಯನ್ನು ಭಗವಂತ ಕರುಣಿಸಿದ್ದಾನೆ.

ಭಗವಂತನು ನಮಗೆ ಕರುಣಿಸಿರುವ ವ್ಯವಸ್ಥೆಯನ್ನು ಹಾಳು ಮಾಡದೆ, ಸಮರ್ಪಕವಾಗಿ ಬಳಸಿಕೊಳ್ಳುವುದು ನಮ್ಮ ಕರ್ತವ್ಯ. ಈ ವ್ಯವಸ್ಥೆಯನ್ನು ಹಾಳು ಮಾಡಿದರೆ ಮತ್ತೆ ಅದನ್ನು ಸರಿಮಾಡುವುದು ಸಾಧ್ಯವಿಲ್ಲ. ಆದುದರಿಂದ, ಪ್ರಕೃತಿಗೆ ಹಾನಿಯುಂಟಾಗದಂತೆ ನೈಪುಣ್ಯದಿಂದ ಉಪಯೋಗಿಸಿಕೊಳ್ಳುವುದು ನಮ್ಮ ಜವಾಬ್ದಾರಿ.

ಭಗವಂತ ಬೇರೆ ಯಾವ ಪ್ರಾಣಿಗೂ ನೀಡದ ವಿಶೇಷ ಬುದ್ಧಿಶಕ್ತಿಯನ್ನು ಮನುಷ್ಯನಿಗೆ ನೀಡಿದ್ದಾನೆ. ಜೊತೆಗೆ, ಅನೇಕ ಉತ್ತಮ ಗುಣಗಳನ್ನೂ ನೀಡಿದ್ದಾನೆ.

ಈ ಗುಣಗಳನ್ನು ಉಪಯೋಗಿಸಿಕೊಂಡು ಇನ್ನೊಬ್ಬರಿಗೆ ಉಪಕಾರವಾಗುವಂತಹ ಕೆಲಸ ಮಾಡಬೇಕು. ಉಪಕಾರ ಮಾಡಿದಾಗ ಮಾತ್ರವೇ ನಮ್ಮ ಜೀವನ ಸಾರ್ಥಕವಾಗುತ್ತದೆ. ಮನುಷ್ಯರಾಗಿ ಹುಟ್ಟಿದವರು ಪರೋಪಕಾರದ ಕೆಲಸಗಳನ್ನು ಮಾಡಬೇಕು. ಪ್ರಾಣಿಗಳಿಗೆ ಉಪಕಾರ ಮಾಡುವ ಸಾಮರ್ಥ್ಯವಿರುವುದಿಲ್ಲ. ಪ್ರಾಣಿಗಳು ಇನ್ನೊಬ್ಬರಿಗೆ ಉಪಯೋಗವಾಗುವಂತಹ ಕೆಲಸ ಮಾಡದಿದ್ದರೂ ತಮ್ಮ ಚರ್ಮ ಮತ್ತು ಅವಯವಗಳ ಮೂಲಕ ಮನುಷ್ಯನ ಉಪಯೋಗಕ್ಕೆ ಬರುತ್ತವೆ. ಆದರೆ ಮನುಷ್ಯನ ಚರ್ಮ ಮತ್ತು ಅವಯವಗಳಿಗೆ ಯಾವ ಉಪಯೋಗವೂ ಇಲ್ಲ. ಆದುದರಿಂದ, ಮನುಷ್ಯ ತನ್ನ ಕೆಲಸಗಳಿಂದ ಇತರರಿಗೆ ಉಪಕಾರ ಮಾಡಬೇಕೆಂದು ಶಾಸ್ತ್ರಗಳಲ್ಲಿ ಹೇಳಿದೆ. ಉಪಕಾರಗುಣವು ಮನುಷ್ಯನಿಗೆ ಅತ್ಯಂತ ಅವಶ್ಯಕ. ಸನಾತನ ಧರ್ಮದ ಪರಿರಕ್ಷಕರಾಗಿದ್ದ ಶಂಕರಾಚಾರ್ಯರ ಜೀವನದ ಒಂದು ಘಟನೆ ನೆನಪಿಗೆ ಬರುತ್ತದೆ. ಶಂಕರಾಚಾರ್ಯರು ತಮ್ಮ ಬಾಲ್ಯದಲ್ಲಿ ಅತಿಮಾನುಷವಾದ ಲೀಲೆಗಳನ್ನು ಪ್ರಕಟಪಡಿಸುತ್ತಿದ್ದರು. ಅದನ್ನು ತಿಳಿದ ಕೇರಳದ ರಾಜನು ಅವರ ಹತ್ತಿರ ಬಂದು ಅನೇಕ ಕಾಣಿಕೆಗಳನ್ನೂ, ಆಭರಣಗಳನ್ನೂ ಕಾಣಿಕೆಯಾಗಿ ಸಮರ್ಪಣೆ ಮಾಡಿದ. ಆಗ ಶಂಕರಾಚಾರ್ಯರು ಬ್ರಹ್ಮಚಾರಿಯಾಗಿ ಗುರುಕುಲದಲ್ಲಿ ವಾಸ ಮಾಡುತ್ತ ಅಧ್ಯಯನದಲ್ಲಿ ನಿರತರಾಗಿದ್ದರು. ಆದುದರಿಂದ ಶಂಕರರು “ಅಧ್ಯಯನ ಮತ್ತು ಭಿಕ್ಷಾಟನೆಯಿಂದ ಜೀವಿಸುವುದು ನಮ್ಮ ಕರ್ತವ್ಯ, ನಮಗೆ ಈ ಸಂಪತ್ತಿನ ಅವಶ್ಯಕತೆಯಿಲ್ಲ. ಇದರ ಅವಶ್ಯಕತೆ ಯಾರಿಗಿದೆಯೋ ಅವರಿಗೆ ಕೊಡಿ. ನಾವು ಏನನ್ನೂ ಸಂಗ್ರಹಿಸಿಟ್ಟುಕೊಳ್ಳಬಾರದು, ಅಂದಂದಿನ ಜೀವನಕ್ಕೆ ಅವಶ್ಯಕವಾದ ಆಹಾರವನ್ನು ಅಂದಂದೇ ಭಿಕ್ಷಾಟನೆ ಮಾಡಿ ಬಳಸುವುದು ನಮಗೆ ಶಾಸ್ತ್ರ ವಿಧಿಸಿದ ಧರ್ಮ. ಆದುದರಿಂದ ಇದು ನಮಗೆ ಬೇಡ” ಎಂದು ಹೇಳಿದ್ದರು.

ಕಷ್ಟದಲ್ಲಿರುವ ಜನರಿಗೆ ಉಪಕಾರ ಮಾಡುವ ಗುಣ ಮನುಷ್ಯನಿಗೆ ಅವಶ್ಯಕ ಎಂದು ಶಂಕರಾಚಾರ್ಯರು ಈ ಘಟನೆಯ ಮೂಲಕ ಸೂಚಿಸಿದ್ದರು. ನಮ್ಮ ಸಾಮರ್ಥ್ಯಕ್ಕನುಗುಣವಾಗಿ ಕಷ್ಟದಲ್ಲಿರುವವರಿಗೆ ಉಪಕಾರ ಮಾಡಬೇಕು. ಭಗವಂತನು ನಮ್ಮ ಉಪಯೋಗಕ್ಕಾಗಿ ಪಂಚಭೂತಾತ್ಮಕವಾದ ಸುಂದರವಾದ ಪ್ರಕೃತಿಯನ್ನು ಕರುಣಿಸಿದ್ದಾನೆ. ಅದನ್ನು ಎಷ್ಟು ಬೇಕೋ ಅಷ್ಟು ಮಾತ್ರ ಬಳಸಿಕೊಳ್ಳಬೇಕು. ನಮ್ಮ ಪರಿಸರವನ್ನು, ಭೂಮಿಯನ್ನು, ವಾತಾವರಣವನ್ನು ಹಾಳಾಗದಂತೆ ಕಾಪಾಡಿಕೊಳ್ಳಬೇಕು. “ನಮಗೆ ಈ ಸಮಯಕ್ಕೆ ಅಗತ್ಯವಿರುವಷ್ಟು ದೊರೆತಿದೆ, ಬೇರೆಯವರ ಅವಶ್ಯಕತೆಗಳ ಚಿಂತೆ ನಮಗೇಕೆ? ಅದು ಹಾಳಾದರೆ ಅದರಿಂದ ನಮಗೇನೂ ನಷ್ಟವಿಲ್ಲ” ಎಂಬ ಮನೋವೃತ್ತಿ ಸಲ್ಲದು. ಉಪಕಾರಗುಣ ಮತ್ತು ಪರಿಸರ ರಕ್ಷಣೆ ಎಂಬ ಎರಡು ಉನ್ನತ ಮೌಲ್ಯಗಳನ್ನು ಇರಿಸಿಕೊಂಡು ಅದಮ್ಯ ಚೇತನ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದರ ಮೂಲಕ ಲಕ್ಷಾಂತರ ಜನರಿಗೆ ವಿಶೇಷವಾದ ಉಪಕಾರದ ಜೊತೆಗೆ ಪರಿಸರ ರಕ್ಷಣೆಯ ಕೆಲಸವನ್ನೂ ಮಾಡುತ್ತಿರುವುದು ಸಂತೋಷಕರ ಸಂಗತಿ. ಇದೊಂದು ಆದರ್ಶಪ್ರಾಯವಾದ ಸಂಸ್ಥೆಯಾಗಿದೆ. ಇದರ ಮೂಲಕ ಭವಿಷ್ಯದಲ್ಲಿಯೂ ಉತ್ತಮವಾದ ಲೋಕೋಪಕಾರದ ಕೆಲಸ ನಡೆಯಲಿ.

ಪುಟ 4 ರಲ್ಲಿ ಮುಂದುವರೆದಿದೆ



“ಅವಿಭಾಜ್ಯ ಭಾರತದ ಉಳಿವಿಗೆ ಶಾಸ್ತ್ರದ ಜೊತೆ ಶಸ್ತ್ರವೂ ಬೇಕು”
-ಪ್ರಕಾಶ್ ಬೆಳವಾಡಿ
ಪುಟ 5


ವ್ಯಕ್ತಿ ವಿಶೇಷ ಮಾಲಿಕೆ
ಡಾ. ಕೇಶವ ಬಲಿರಾಮ್ ಹೆಡಗೆವಾರ್
-ಕೆ. ಜನಾರ್ದನ ತುಂಗ
ಪುಟ 9


ಕಲಬುರ್ಗಿ ಜಿಲ್ಲೆಯ ಹಲವು ದೇಗುಲಗಳು (ಭಾಗ 2)
-ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ
ಪುಟ 7


ಹೂವಿನ ಹಿಲಾಲು – ಅಶೋಕ
-ಛಾಯಾ ಓಕ್ ಬಾಪಟ್
ಪುಟ 8

# ಅನಂತ ಪ್ರೇರಣಾ ಕೇಂದ್ರ- ನಾಡ ಸೇವಕರಿಗೆ ದಾರಿದೀಪ




ಅನಂತಕುಮಾರ್ - ದೇಶವು ಕಂಡ ಅಪೂರ್ವ ಸಜ್ಜನ ರಾಜಕಾರಣಿಗಳಲ್ಲೊಬ್ಬರು. ಸತತ ಆರು ಬಾರಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ರಾಷ್ಟ್ರದ ಸಂಸತ್ತಿಗೆ ಆಯ್ಕೆಯಾದ ಯಶಸ್ವೀ ಜನನಾಯಕ. ತಮ್ಮ ವ್ಯಕ್ತಿತ್ವ, ಕರ್ತೃತ್ವ ಮತ್ತು ನೇತೃತ್ವಗಳಿಂದ ಸಮಸ್ತ ರಾಷ್ಟ್ರದ ಗಮನ ಸೆಳೆದವರು. ತಮ್ಮ ಮಾರ್ಗದರ್ಶಕರಾದ ಗುರುಹಿರಿಯರಿಂದ ಸತ್ಪಥಗಾಮಿಯೆಂಬ ಪ್ರಶಂಸೆಯನ್ನು ಗಳಿಸಿಕೊಂಡಂತೆಯೇ, ಜನಸಾಮಾನ್ಯರಿಂದಲೂ ಸಕಲರ ಹಿತಾಕಾಂಕ್ಷಿ ನಾಯಕನೆಂಬ ಬಿರುದು ತುಂಬಿದ ಹೊಗಳಿಕೆಗೆ ಪಾತ್ರರಾದವರು. ಪ್ರಗತಿಪಥದಲ್ಲಿ ದೇಶವನ್ನು ಮುನ್ನಡೆಸುವ ಹೊಣೆ ಹೊತ್ತ ಕಾಲದಲ್ಲೇ ಕನ್ನಡನಾಡು ನುಡಿನೆಲಜಲಗಳ ಹಿತವನ್ನು ಕಾಪಾಡಲು ಕಂಕಣಬದ್ಧರಾಗಿ ನಿಂತವರು. ಅಕಾಲದಲ್ಲಿ ನಾಡವರನ್ನು ತೊರೆದು ಹೋದರೂ ತಮ್ಮ ಗುಣಶೀಲಗಳಿಂದ, ನಿತ್ಯನೂತನವಾದ ಕರ್ತೃತ್ವ ಶಕ್ತಿಯಿಂದ, ಸದಾ ಜಾಗೃತವಾಗಿದ್ದ ರಾಷ್ಟ್ರಭಕ್ತಿಯಿಂದ ಎಲ್ಲರಿಗೂ ಮಾದರಿಯಾಗಿ, ಪ್ರೇರಕಶಕ್ತಿಯಾಗಿ ಜನಮನದಲ್ಲಿ ನೆಲೆನಿಂತವರು- ಅನಂತಕುಮಾರ್.

ಅನಂತಕುಮಾರರ ಬದುಕಿನ ಸಾರ್ಥಕತೆಯನ್ನು ಅರಿತವರಿಗೂ, ನಾಯಕತ್ವದ ಬೆಳವಣಿಗೆಯ ರೂಪರೇಷೆಯನ್ನು ಗುರುತಿಸಲೆಳಸುವವರಿಗೂ, ನಾಡ ಸೇವೆಯಲ್ಲಿ ತೊಡಗಿಕೊಳ್ಳಬಯಸುವ ಯುವಶಕ್ತಿಗಳಿಗೂ ದಾರಿದೀಪವಾಗಲೆಂಬ ಮಹದುದ್ದೇಶದಿಂದ ಅನಂತಕುಮಾರರ ಜೀವನ, ವ್ಯಕ್ತಿತ್ವ, ಸಾಧನೆಗಳನ್ನು ಪರಿಚಯಿಸುವ ಮಾಹಿತಿಕೇಂದ್ರವೊಂದನ್ನು ತೆರೆಯಲು ಅನಂತಕುಮಾರರ ಆಪ್ತರ ಬಳಗವು ಉದ್ದೇಶಿಸಿದೆ. ಇದೀಗ ಲೋಕಾರ್ಪಣೆಗೊಂಡಿರುವ ಈ ಕೇಂದ್ರವೇ ಅನಂತಪ್ರೇರಣಾ ಕೇಂದ್ರ. ಅನಂತಕುಮಾರರ ಆಶೋತ್ತರಗಳನ್ನು ಮುಂದುವರಿಸಿ ನಿರ್ವಹಿಸುವ ಹೊಣೆಹೊತ್ತ ಅದಮ್ಯಚೇತನ ಸಂಸ್ಥೆಯ ಸಹಯೋಗದಲ್ಲಿ ಈ ಕೇಂದ್ರವು ಕಾರ್ಯನಿರ್ವಹಿಸುತ್ತದೆ.

ಬಹುಮುಖೀ ಕರ್ತೃತ್ವಶಾಲಿ ಅನಂತಕುಮಾರ್ ತಮ್ಮ ಸರ್ವತೋಮುಖ ಸಮಾಜಸೇವೆಯ ಸಂಪರ್ಕ ಕಚೇರಿಗಾಗಿ ಏಳೆಂಟು ರಸ್ತೆಗಳು ಕೂಡುವ ಕೇಂದ್ರಸ್ಥಳವಾದ ಸೌತ್ ಎಂಡ್ ವೃತ್ತದಲ್ಲಿರುವ ಕಟ್ಟಡವನ್ನು ಆಯ್ದುಕೊಂಡದ್ದೂ ಸೂಕ್ತವೇ ಆಗಿತ್ತು. ಬೆಂಗಳೂರು ದಕ್ಷಿಣ ಕ್ಷೇತ್ರದ ಸಹಸ್ರಾರು ಮತದಾರರು ತಮ್ಮ ನೆಚ್ಚಿನ ಮುಖಂಡನನ್ನು ಕಾಣಲು, ಭೇಟಿಮಾಡಿ ತಮ್ಮ ಸುಖದುಃಖಗಳನ್ನು ಹಂಚಿಕೊಳ್ಳಲು ಇಲ್ಲಿಗೆ ದಿನನಿತ್ಯ ಬರುತ್ತಿದ್ದರು. ಅನಂತಕುಮಾರರಿಗೆ ಜನನಾಯಕನೆಂಬ ಅನ್ವರ್ಥನಾಮ ಬರಲು ಕಾರಣವಾದ ಈ ಕೇಂದ್ರವು ಇದೀಗ ಅವರ ನಿಧನದ ತರುವಾಯ ನಿರಂತರವಾಗಿ ಅವರ ಸ್ಮರಣೆಗೆ ಅವಕಾಶ ಕಲ್ಪಿಸುವ ತಾಣವಾಗಿರುವುದು ಅತ್ಯಂತ ಸಮಂಜಸವಾಗಿದೆ. ತಮ್ಮ ಬಳಿ ಬಂದವರೆಲ್ಲರ ಕಷ್ಟಕ್ಕೆ ಸದಾ ಸ್ಪಂದಿಸುತ್ತಿದ್ದ, ಸಂಸದರಾಗಿ ಸಚಿವರಾಗಿ ಸದಾ ಸಮಾಜಮುಖೀ ಅಭಿವೃದ್ಧಿಪರ ಕಾರ್ಯಗಳಲ್ಲಿ ತೊಡಗಿರುತ್ತಿದ್ದ ಹಸಿರು ಜೀವನ ಶೈಲಿಯ ಹರಿಕಾರರಾಗಿದ್ದ ನಾಯಕ ಅನಂತಕುಮಾರ್. ಅವರ ಬದುಕು ಎಲ್ಲರಿಗೂ ಸಾರ್ಥಕ ಬದುಕಿನೆಡೆಗೆ ಪ್ರೇರಣೆ ನೀಡಲೆಂಬ ಉದ್ದೇಶದಿಂದ ರೂಪುಗೊಂಡಿರುವ ಈ ಕೇಂದ್ರಕ್ಕೆ ಅನಂತ ಪ್ರೇರಣಾ ಕೇಂದ್ರವೆಂದು ಹೆಸರಿಸಿರುವುದೂ ಅರ್ಥಪೂರ್ಣವಾಗಿದೆ.

## ಛಾಯಾಚಿತ್ರ ಪ್ರದರ್ಶಿನಿ

ಈ ಪ್ರೇರಣಾ ಕೇಂದ್ರದಲ್ಲಿ ಅನಂತಕುಮಾರ್ ಅವರ ಬಾಲ್ಯದಿಂದ ಮೊದಲುಗೊಂಡು ಎಬಿವಿಪಿ ಕಾರ್ಯಕರ್ತರಾಗಿ ಅವರು ಗಳಿಸಿಕೊಂಡ ಅನುಭವ, ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷವು ಬೆಳೆಯಲು ಅವರು ದುಡಿದ ಪರಿ, ಆರು ಬಾರಿ ಸಂಸದರಾಗಿ, ಕೇಂದ್ರದಲ್ಲಿ ವಿವಿಧ ಖಾತೆಗಳ ಸಚಿವರಾಗಿ ಅನಂತಕುಮಾರ್ ಸಾಧಿಸಿದ ಕಾರ್ಯಗಳು, ಅಚ್ಚರಿ ಮೂಡಿಸುವಂತೆ ಅವರು ನಾಯಕತ್ವದ ಸೋಪಾನಗಳನ್ನು ಏರಿ ನಿಂತ ರೀತಿ- ಎಲ್ಲವನ್ನೂ ಛಾಯಾಚಿತ್ರಗಳ ಪ್ರದರ್ಶನದ ಮೂಲಕ ಪರಿಚಯಿಸಲಾಗುತ್ತಿದೆ. ಈ ಚಿತ್ರಗಳನ್ನು ಸವಿವರ ಅರ್ಥಮಾಡಿಕೊಳ್ಳಲು ಧ್ವನಿರೂಪದ ವ್ಯಾಖ್ಯಾನವುಳ್ಳ ಮೊಬೈಲ್ ಆಪ್ ಸೌಕರ್ಯವನ್ನೂ ವ್ಯವಸ್ಥೆಮಾಡಲಾಗುತ್ತಿದೆ.

## ದೇಶೀಯ ಪರಿಸರಸ್ನೇಹಿ ವಸ್ತುಬಳಕೆಗೆ ಪ್ರೋತ್ಸಾಹ

ಅನಂತ ಪ್ರೇರಣಾ ಕೇಂದ್ರವು ಕೇಂದ್ರದ ಆವರಣದಲ್ಲಿ ಸಾಪ್ತಾಹಿಕ ಮಾರಾಟ ಮೇಳವನ್ನು ಆಯೋಜಿಸಲು ಸಿದ್ಧತೆ ನಡೆಸಿದೆ. ಅದಮ್ಯ ಚೇತನವು ಹಮ್ಮಿಕೊಂಡಿರುವ ಪೌಷ್ಟಿಕ ಸಾತ್ವಿಕ ಆಹಾರ ಆಂದೋಲನದ ಪ್ರಚಾರವೂ ಈ ಕಾರ್ಯಕ್ರಮದ ಭಾಗವಾಗಿರುತ್ತದೆ. ವಿಜ್ಞಾನಿಗಳೂ ಪೋಷಕಾಂಶ ತಜ್ಞರೂ ಸಿದ್ಧಪಡಿಸಿರುವ ಆಹಾರಧಾನ್ಯಗಳ ಕಿಟ್ ಗಳ ಪ್ರದರ್ಶನ ಮತ್ತು ಮಾರಾಟವನ್ನು ಕೈಗೊಳ್ಳಲಾಗುತ್ತದೆ. ದೇಶೀಯವೂ ಪರಿಸರಕ್ಕೆ ಪೂರಕವೂ ಮರುಬಳಕೆಗೆ ಅವಕಾಶವೂ ಇರುವಂತಹ ಕಚ್ಚಾವಸ್ತುಗಳಿಂದ ತಯಾರಾದ ಬಟ್ಟೆ ಚೀಲಗಳು ಮತ್ತಿತರ ದಿನನಿತ್ಯದ ಬಳಕೆಯ ಸಾಮಗ್ರಿಗಳ ತಯಾರಿಕೆ ಮತ್ತು ಖರೀದಿಯನ್ನು ಪ್ರೋತ್ಸಾಹಿಸಲು ಅನಂತಪ್ರೇರಣಾಕೇಂದ್ರದ ಆವರಣದಲ್ಲಿ ವಾರಕ್ಕೊಮ್ಮೆ ಅಂತಹ ವಸ್ತುಗಳ ಮಾರಾಟಕೇಂದ್ರವನ್ನು ತೆರೆಯಲು ನಿರ್ಧರಿಸಲಾಗಿದೆ.

ಪುಟ 6 ರಲ್ಲಿ ಮುಂದುವರಿದಿದೆ




ಅನಂತ ಪಥ ಮಾಸ ಪತ್ರಿಕೆಯ 23ನೇ ಸಂಚಿಕೆಯನ್ನು ದಿನಾಂಕ 22-05-2022 ರಂದು ಅನಂತಕುಮಾರ್ ಅವರ ಬಂಧುಗಳಾದ ಶ್ರೀಮತಿ ಮತ್ತು ಶ್ರೀ ಲಕ್ಷಣ್ ರಾವ್ ಓಕ್ ಅವರು ಹುಬ್ಬಳ್ಳಿಯಲ್ಲಿ ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಸರ್ವಶ್ರೀ ನಂದಕುಮಾರ್, ಪ್ರದೀಪ್ ಓಕ್, ಜಗದೀಶ್ ಬಾಪಟ್, ಪ್ರಶಾಂತ್ ನಾತು ಮೊದಲಾದವರು ಉಪಸ್ಥಿತರಿದ್ದರು.

## 370 ನೇ ವಿಧಿಯ ರದ್ದತಿಯ ನಂತರ

# ಕಾಶ್ಮೀರದಲ್ಲಿ ವಿಕಾಸ ಪರ್ವ

ಸಂವಿಧಾನದ 370ನೇ ವಿಧಿಯು ಒಂದು ತಾತ್ಕಾಲಿಕ ಪ್ರಾವಧಾನವಾಗಿತ್ತು. ಆದರೂ ಕೇಂದ್ರದ ಕಾಂಗ್ರೆಸ್ ಮತ್ತು ಜಮ್ಮು-ಕಾಶ್ಮೀರದ ಇತರ ಪಕ್ಷಗಳು ತಮ್ಮ ಕುಟುಂಬ ರಾಜಕಾರಣ ಮತ್ತು ಅಧಿಕಾರದಾಹದಿಂದ ಈ ವಿಧಿಯನ್ನು ದೀರ್ಘಕಾಲ ಉಳಿಸಿ, ಬಳಸಿಕೊಂಡವು. ಈ ನಡೆಯು ರಾಜ್ಯದ ಪ್ರಗತಿಗೆ ಅಡ್ಡಿಯಾಯಿತು ಮತ್ತು ಪ್ರತ್ಯೇಕ ಸ್ಥಾನಮಾನ ಹಾಗೂ ಪ್ರತ್ಯೇಕತೆಯ ಉಗ್ರವಾದಕ್ಕೆ ಕಾರಣವಾಯಿತು. ಜೊತೆಗೆ, ಇಸ್ಲಾಂನ ಮೂಲಭೂತವಾದಿಗಳಿಗೆ ನೆರೆಯ ಶತ್ರುರಾಷ್ಟ್ರದ ಸಹಾಯವನ್ನು ಪಡೆದು ತಮ್ಮ ಪ್ರಭಾವವನ್ನು ಸ್ಥಾಪಿಸಲು ಅನುಕೂಲವಾಯಿತು. ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಗೂ 370ನೇ ವಿಧಿಯೇ ಕಾರಣವಾಯಿತು. ಕುಟುಂಬ ರಾಜಕೀಯವನ್ನು ಪೋಷಿಸುವ ಪಕ್ಷಗಳು ಏಳು ದಶಕಗಳ ಕಾಲ ಜಮ್ಮು ಕಾಶ್ಮೀರವನ್ನು ಆಳುತ್ತ ಜನರನ್ನು ದಾರಿ ತಪ್ಪಿಸಿದವು. ಮಾನವ ಹಕ್ಕು ಆಯೋಗ, ಮಹಿಳಾ ಆಯೋಗ ಮತ್ತು ಪಜಾ-ಪವ ಆಯೋಗಗಳ ವ್ಯಾಪ್ತಿಯಿಂದ ಕಾಶ್ಮೀರದ ಜನರು ವಂಚಿತರಾಗಿದ್ದರು. 370ನೇ ವಿಧಿಯ ಹೆಸರಿನಲ್ಲಿ ಜಮ್ಮು-ಕಾಶ್ಮೀರದ ಜನರಲ್ಲಿ ದ್ರೋಹ ಮತ್ತು ದ್ವೇಷ ಭಾವನೆಗಳನ್ನೇ ಬೆಳೆಸಿದರು. ಮುಂದೆ 1990ರ ಆಸುಪಾಸಿನಲ್ಲಿ ಹಿಂದುಗಳ ನರಮೇಧಕ್ಕೆ ಇದೇ ಕಾರಣವಾಯಿತು. ಶೋಷಣೆಗೆ ಒಳಗಾದವರನ್ನೇ ಅಪರಾಧಿಗಳೆಂದು ಬಿಂಬಿಸಿ ಕಾಶ್ಮೀರಿ ಪಂಡಿತರನ್ನು ತಾಯ್ನಾಡಿನಿಂದ ಹೊರಹಾಕಲಾಯಿತು. ಇದಕ್ಕೆ ಅಂದಿನ ಸರಕಾರಗಳ ಬೆಂಬಲವೂ ದೊರೆಯಿತು.

ವಿಶೇಷ ಸ್ಥಾನಮಾನದ ಹೆಸರಿನಲ್ಲಿ ಐತಿಹಾಸಿಕ ಪ್ರಮಾದಗಳು ನಡೆದು ಹೋಗಿದ್ದವು. ಯಾವುದೇ ಖಾಸಗಿ ಹೂಡಿಕೆಗಳಿಗೆ ಅವಕಾಶವಿಲ್ಲದಿದ್ದ ಕಾರಣ ಆಸ್ಪತ್ರೆಗಳು, ಉದ್ಯಮಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಸ್ಥಾಪನೆಯಾಗದೆ ಸ್ಥಳೀಯರಿಗೆ ಯಾವುದೇ ಉದ್ಯೋಗಾವಕಾಶ ದೊರೆಯಲಿಲ್ಲ ಮತ್ತು ರಾಜ್ಯದ ಖಜಾನೆಗೆ ಆದಾಯದ ಕೊರತೆ ಉಂಟಾಗಿತ್ತು. ಇವೆಲ್ಲವನ್ನೂ ಸೂಕ್ಷ್ಮವಾಗಿ ಪರಿಗಣಿಸಿ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು 05/08/2019 ರಂದು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿ ಐತಿಹಾಸಿಕ ಪ್ರಮಾದವನ್ನು ಸರಿಪಡಿಸಿದೆ. ಆದರೆ ಬುದ್ಧಿಜೀವಿಗಳು ಎಂದು ತಮ್ಮನ್ನು ತಾವೇ ಕರೆದುಕೊಂಡ ದೆಹಲಿಯ ಖಾನ್ ಮಾರ್ಕೆಟ್ ಪತ್ರಕರ್ತರು ಕಾಶ್ಮೀರವನ್ನು ಕೆಟ್ಟ ಬೆಳಕಿನಲ್ಲಿ ತೋರಿಸಲು ಎಲ್ಲ ಪ್ರಯತ್ನಗಳನ್ನು ಮಾಡಿದರು. ಸಾಮಾನ್ಯ ಜನರಿಗೆ ಉತ್ತಮ ಜೀವನಮಟ್ಟದ ಅವಕಾಶ ಮಾಯವಾಗಿದೆ ಎಂದು ಪ್ರಚಾರ ಮಾಡಿದರು.

ಸರ್ಕಾರವು ಈ ಹೊಸ ಕಾಶ್ಮೀರದ ನೀತಿಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಅನೇಕ ಪಕ್ಷಗಳು ಇದನ್ನು ವಿರೋಧಿಸಿದವು. ಕೆಲವು ವಿರೋಧಪಕ್ಷಗಳು ಸಾರ್ವಜನಿಕ ಅಭಿಪ್ರಾಯಕ್ಕೆ ಮಣಿಯಬೇಕಾಗಿ ಬಂದಿತು. ರಾಜ್ಯಸಭೆಯಲ್ಲಿ ಅತ್ಯಂತ ಅರ್ಥಪೂರ್ಣವಾದ ಚರ್ಚೆ ನಡೆಯಿತು. ಅಂತಿಮವಾಗಿ ಮೂರನೇ ಎರಡರಷ್ಟು ಬಹುಮತದೊಂದಿಗೆ ಮಸೂದೆಯನ್ನು ಅನುಮೋದಿಸಲಾಯಿತು. ಈ ಕ್ರಮದಿಂದ ದೇಶದ ಕಾನೂನುಗಳು ಎಲ್ಲ ಪ್ರಾಂತ್ಯಗಳಿಗೂ ಸಮಾನವಾಗಿ ಅನ್ವಯಿಸುತ್ತವೆ ಎಂಬ ಸಂದೇಶವು ಇಡೀ ದೇಶಕ್ಕೆ ರವಾನೆಯಾಯಿತು. ಅಂದಿನ ವಿತ್ತ ಸಚಿವರಾಗಿದ್ದ ಅರುಣ್ ಜೇಟ್ಲಿಯವರು ಹೇಳಿದಂತೆ ಭಾರತದ ನಾಗರಿಕರು ಅನುಭವಿಸುತ್ತಿರುವ ಸಾಂವಿಧಾನಿಕ ಹಕ್ಕುಗಳು ಮತ್ತು ಕೇಂದ್ರ ಸರ್ಕಾರದ ಯೋಜನೆಗಳ ಲಾಭಗಳು ಕಾಶ್ಮೀರದ ಜನರಿಗೂ ಇಂದು ಲಭ್ಯವಾಗುತ್ತಿವೆ.

ಜಮ್ಮು ಕಾಶ್ಮೀರದ ಸರ್ವಾಂಗೀಣ ಅಭಿವೃದ್ಧಿಗಾಗಿ ನರೇಂದ್ರ ಮೋದಿಯವರ ಸರ್ಕಾರವು ಮಹತ್ವಾಕಾಂಕ್ಷೆಯ ಮಾರ್ಗಸೂಚಿಯನ್ನು ತಯಾರಿಸಿದೆ. ಪ್ರದೇಶದ ಅಭಿವೃದ್ಧಿ ಮತ್ತು ಪಾರದರ್ಶಕ ಆಡಳಿತಕ್ಕಾಗಿ ವ್ಯವಸ್ಥೆಗಳು ರೂಪುಗೊಳ್ಳುತ್ತಿವೆ. ಕಾಶ್ಮೀರವು ಪ್ರಗತಿ ಕಾಣುವುದರ ಜೊತೆಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಯಾಗಿ ಬದಲಾವಣೆಯಾಗುತ್ತಿದೆ. ಕಾಶ್ಮೀರದಲ್ಲಿ ಜಿಲ್ಲಾ ಅಭಿವೃದ್ಧಿ ಮಂಡಳಿಗಳು ಅಸ್ತಿತ್ವಕ್ಕೆ ಬಂದಿವೆ. 30 ಸಾವಿರಕ್ಕೂ ಹೆಚ್ಚು ಸಾರ್ವಜನಿಕ ಪ್ರತಿನಿಧಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಭಾಗವಾಗಿದ್ದಾರೆ. ಇದು ಜಮ್ಮು-ಕಾಶ್ಮೀರಕ್ಕೆ ಮತ್ತು ಇಡೀ ರಾಷ್ಟ್ರಕ್ಕೆ ಹೆಮ್ಮೆಯ ವಿಷಯವಾಗಿದೆ. ಜಿಲ್ಲಾ ಪಂಚಾಯತಿಗಳು ಪ್ರತಿಯೊಂದು ಹಳ್ಳಿಯನ್ನೂ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುತ್ತಿವೆ. ನ್ಯಾಯಬಾಹಿರವಾದ ಸ್ಥಳೀಯ ಕಾನೂನುಗಳನ್ನು ತೆಗೆದುಹಾಕಲಾಗಿದೆ ಮತ್ತು ಕೇಂದ್ರದ 890ಕ್ಕೂ ಹೆಚ್ಚು ಕಾನೂನುಗಳು ಜಮ್ಮು

## ‘ದೇಶಮೊದಲು’ ಸಂವಾದದಲ್ಲಿ ಕೇಂದ್ರ ಸಚಿವ ಶ್ರೀ ಮುರಳೀಧರನ್ ವಿಶ್ಲೇಷಣೆ




ಕಾಶ್ಮೀರ ಮತ್ತು ಲಡಾಖ್ ಜನರಿಗೆ ಅನ್ವಯಿಸುತ್ತಿವೆ. 370ನೇ ವಿಧಿಯ ರದ್ದತಿಯ ನಂತರ ಕೇಂದ್ರಾಡಳಿತ ಪ್ರದೇಶಗಳೆಂದು ಘೋಷಿತವಾದ ಜಮ್ಮು, ಕಾಶ್ಮೀರ ಮತ್ತು ಲಡಾಖ್ ಪ್ರದೇಶಗಳು ಅಭೂತಪೂರ್ವ ಪ್ರಗತಿ ಕಾಣುತ್ತಿವೆ. ಬಂಡವಾಳ ಹೂಡಿಕೆಗೆ ಪ್ರೋತ್ಸಾಹ, ಬಂಡವಾಳದ ಸಹಾಯ, ಸರಕು ಸೇವಾ ತೆರಿಗೆ ಹಾಗೂ ಹೊಸ ಕೈಗಾರಿಕೆಗಳ ವರ್ಧನೆಗೆ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.

ಕಾಶ್ಮೀರದ ಉತ್ಪಾದಕತೆಯನ್ನು ಹೆಚ್ಚಿಸಲು ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಡೈರಿ ಹಾಗೂ ಒಳನಾಡು ಮೀನುಗಾರಿಕೆ ಸೇರಿದಂತೆ ಪ್ರಾಥಮಿಕ ವಲಯದಲ್ಲಿ ಸುಮಾರು 78 ಸಾವಿರ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ. 2015 ರ ಪ್ರಧಾನಮಂತ್ರಿಗಳ ಅಭಿವೃದ್ಧಿ ಪ್ಯಾಕೇಜ್ ಅಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ಜಾರಿಯ ವೇಗವನ್ನು ಹೆಚ್ಚಿಸಲಾಗಿದೆ. 15 ಸಚಿವಾಲಯಗಳು 58477 ಕೋಟಿ ರೂಪಾಯಿಗಳನ್ನು ರಸ್ತೆ, ವಿದ್ಯುತ್, ಆರೋಗ್ಯ, ಶಿಕ್ಷಣ, ಪ್ರವಾಸೋದ್ಯಮ, ಕೌಶಲ್ಯಾಭಿವೃದ್ಧಿ ಮುಂತಾದ ವಿವಿಧ ಕ್ಷೇತ್ರಗಳ 53 ಯೋಜನೆಗಳಲ್ಲಿ ಬಳಸುತ್ತಿವೆ. ಈಗಾಗಲೇ 25 ಯೋಜನೆಗಳು ಪೂರ್ಣಗೊಂಡಿವೆ. ಜಮ್ಮು-ಕಾಶ್ಮೀರದ 4.5 ಲಕ್ಷ ಜನರಿಗೆ ಉದ್ಯೋಗ ನೀಡಲಿರುವ ಕೈಗಾರಿಕೆಗಳ ಸ್ಥಾಪನೆಗೆ 28400 ಕೋಟಿ ರೂಪಾಯಿಗಳನ್ನು ವ್ಯಯಿಸಲಾಗುತ್ತಿದೆ.

ಸೌಭಾಗ್ಯ, ಉಜ್ವಲಾ ಮತ್ತು ಇಂದ್ರಧನುಷ್ ಯೋಜನೆಗಳು ಸೇರಿದಂತೆ ಅನೇಕ ಯೋಜನೆಗಳು ಜಾರಿಯಲ್ಲಿವೆ. 2021ರಲ್ಲಿ ಸುಮಾರು 1638 ಕೋಟಿ ರೂಪಾಯಿ ವೆಚ್ಚದಲ್ಲಿ 1289 ರಸ್ತೆಗಳ ನಿರ್ಮಾಣದ ಕಾಮಗಾರಿ ಪೂರ್ಣಗೊಂಡಿದೆ. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಅಡಿಯಲ್ಲಿ 14500 ಕಿಲೋಮೀಟರ್ ರಸ್ತೆ ನಿರ್ಮಾಣಗೊಂಡಿದೆ. 2000 ಕೋಟಿ ರೂಪಾಯಿ ವೆಚ್ಚದಲ್ಲಿ ವೈದ್ಯಕೀಯ ಕಾಲೇಜು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಜಮ್ಮು-ಕಾಶ್ಮೀರ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಮತ್ತು ಇತರ ಕಾಲೇಜುಗಳ ಸ್ಥಾಪನೆ ಮಾಡುವುದರ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಒತ್ತುಕೊಡಲಾಗಿದೆ. 5386 ಮೆಗಾವ್ಯಾಟ್ ಸಾಮರ್ಥ್ಯದ 21 ಜಲವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗಿದೆ.

ಜಮ್ಮು-ಕಾಶ್ಮೀರ ಪ್ರದೇಶವು ಹಿಮಾಲಯದ ಗುಡ್ಡಗಾಡು ಪ್ರದೇಶವಾಗಿರುವುದರ ಜೊತೆಗೆ ಭೌಗೋಳಿಕವಾಗಿ ಇತರ ಅನುಕೂಲಗಳನ್ನೂ ಹೊಂದಿದೆ. ಕಾಶ್ಮೀರದ ಕೇಸರಿ ಮತ್ತು ಸೇಬುಗಳನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಬಿಕರಿ ಮಾಡುವ ವ್ಯವಸ್ಥೆ ಮಾಡಲಾಗಿದೆ ಮತ್ತು ಮಾವು, ಲಿಚಿ, ಅಕ್ರೋಟ್, ಸೇಬು ಮತ್ತಿತರ ತೋಟಗಾರಿಕೆ ಉತ್ಪನ್ನಗಳನ್ನು ಹಳ್ಳಿಗಳಿಂದ ಶ್ರೀನಗರಕ್ಕೆ ಸಾಗಿಸಲು ವ್ಯವಸ್ಥೆ ಮಾಡಲಾಗಿದೆ.

(ಪುಟ 4 ರಲ್ಲಿ ಮುಂದುವರೆದಿದೆ)



**ಶ್ರೀ ವಿ. ಮುರಳೀಧರನ್**

ರಾಜ್ಯ ಸಚಿವರು, ವಿದೇಶಾಂಗ ಖಾತೆ, ಭಾರತ ಸರ್ಕಾರ

ಪುಟ 3 ರಿಂದ

# 370 ನೇ ವಿಧಿಯ ರದ್ದತಿಯ ನಂತರ ಕಾಶ್ಮೀರದಲ್ಲಿ ವಿಕಾಸ ಪರ್ವ

ಜಮ್ಮು-ಕಾಶ್ಮೀರ ಸರ್ಕಾರವು ಸುಮಾರು 50,000 ಕೋಟಿ ರೂಪಾಯಿಗಳ ಕೈಗಾರಿಕಾ ಹೂಡಿಕೆ ಪ್ರಸ್ತಾವನೆಯನ್ನು ಸ್ವೀಕರಿಸಿದೆ. ವಿವಿಧ ಇಲಾಖೆಗಳ ಉದ್ಯಮಗಳಿಗೆ 1,37,870 ಕೋಟಿ ರೂಪಾಯಿಗಳ ಸಹಾಯ ನೀಡಲಾಗಿದೆ. ಕಾಶ್ಮೀರ ಪ್ರದೇಶದ ವಿವಿಧ ಇಲಾಖೆಗಳಲ್ಲಿ 26230 ಹುದ್ದೆಗಳನ್ನು ಗುರುತಿಸಲಾಗಿದ್ದು ಅವುಗಳಲ್ಲಿ 11321 ಹುದ್ದೆಗಳಿಗೆ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಆರ್ಥಿಕ ದುರ್ಬಲ ವರ್ಗಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ. ಇದನ್ನು ಜಮ್ಮು ಮತ್ತು ಲಡಾಖ್ ಪ್ರದೇಶಗಳಿಗೂ ಅನ್ವಯಿಸಲಾಗಿದೆ. ಸಮಾಜದ ವಂಚಿತ ವರ್ಗಗಳ ಸಮಗ್ರ ಬೆಳವಣಿಗೆಗೆ ಕರಕುಶಲ, ಕೈಮಗ್ಗ ಮತ್ತು ತೋಟಗಾರಿಕೆ ಉದ್ಯಮಗಳ ಕಿರುಯೋಜನೆಗಳನ್ನು ನಿರೂಪಿಸಲಾಗಿದೆ. ಆಯವ್ಯಯದಲ್ಲಿ ಹಣಕಾಸು ಸಚಿವರು ಹಳ್ಳಿಗಳ ಅಭಿವೃದ್ಧಿಗೆ ವಿಶೇಷವಾದ ಯೋಜನೆಯನ್ನು ಘೋಷಿಸಿದ್ದಾರೆ. ಗಡಿ ಗ್ರಾಮಗಳ ಅಭಿವೃದ್ಧಿಗೆ ಕೆಲವು ಸಹಜವಾದ ಸಮಸ್ಯೆಗಳಿದ್ದು ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲಾಗುತ್ತಿದೆ. ಸ್ಥಳೀಯ ಆರ್ಥಿಕ ಮತ್ತು ಉದ್ಯೋಗಾವಕಾಶಗಳ ಮೂಲಕ ಜಮ್ಮು-ಕಾಶ್ಮೀರದ ಯುವಜನರ ಕಲ್ಯಾಣಕ್ಕೆ ಭಾರತ ಸರ್ಕಾರವು ಬದ್ಧವಾಗಿದೆ.

ಮೊದಲ ಬಾರಿಗೆ ಲಡಾಕ್ ಪ್ರದೇಶವು ಅಭೂತಪೂರ್ವವಾದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ನೋಡುತ್ತಿದೆ. ಇಲ್ಲಿ ವ್ಯಾಪಕವಾದ ರಸ್ತೆಗಳ ಮತ್ತು ಹೆದ್ದಾರಿಗಳ ಜಾಲ ನಿರ್ಮಾಣವಾಗುತ್ತಿದೆ. ದುರ್ಗಮ ಪ್ರದೇಶಗಳಲ್ಲಿ ಅಟಲ್ ಸುರಂಗ ಯೋಜನೆಯು ಜಾರಿಯಲ್ಲಿದೆ. ದೇಶೀಯ ಮತ್ತು ಅಂತಾರಾಷ್ಟ್ರೀಯ ಪ್ರವಾಸೋದ್ಯಮಕ್ಕೆ ಪ್ರಾಶಸ್ತ್ಯ ನೀಡಲಾಗಿದೆ. ಕೃಷಿ ಮತ್ತು ಪಶುಪಾಲನೆಗಳ ಮೂಲಕ ಕೃಷಿಯಾಧಾರಿತ ಆರ್ಥಿಕತೆಯ ಅಸಾಧಾರಣ ಬೆಳವಣಿಗೆಗೆ ಸರಕಾರದ ಯೋಜನೆಗಳು ನೆರವಾಗುತ್ತಿವೆ. ಮಹಿಳೆಯರ ಹಕ್ಕುಗಳು ಮತ್ತು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಜಾಗೃತಿ ಮೂಡುತ್ತಿದೆ. ಶಿಕ್ಷಣ ಮತ್ತು ಕ್ರೀಡಾ ಕ್ಷೇತ್ರಗಳಿಗೆ ಒತ್ತು ನೀಡಲಾಗುತ್ತಿದ್ದು ವಿವಿಧ ಹಂತಗಳಲ್ಲಿ 20 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಗುರುತಿಸಲಾಗಿದೆ. ಈಗಾಗಲೇ 1850 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಭಯೋತ್ಪಾದಕ ಕೃತ್ಯಗಳ ಬಗ್ಗೆ ಸುಳಿವು ನೀಡುವ ಗುಪ್ತಚರ ಜಾಲಗಳನ್ನು ಸ್ಥಾಪಿಸಲಾಗಿದೆ. ಇಡೀ ಪ್ರದೇಶದಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಇವೆಲ್ಲವುಗಳ ಪರಿಣಾಮವಾಗಿ 2018ರಲ್ಲಿ 143ರಷ್ಟಿದ್ದ ಒಳನುಸುಳುವಿಕೆ 2021ರಲ್ಲಿ 34ಕ್ಕೆ ಇಳಿದಿದೆ. 2018ರಲ್ಲಿ ಭಯೋತ್ಪಾದಕ ಘಟನೆಗಳ ಸಂಖ್ಯೆ 417ರಿಂದ 121ಕ್ಕೆ ಇಳಿದಿದೆ. ಇಂದು ಪಾಕಿಸ್ತಾನ ಪ್ರಾಯೋಜಿತ ಪ್ರಯತ್ನಗಳನ್ನು ಬಹಿರಂಗಪಡಿಸಲು ಮತ್ತು ಸಮಾಜವಿರೋಧಿ ಶಕ್ತಿಗಳನ್ನು ಪ್ರತ್ಯೇಕಿಸಲು ಸ್ಥಳೀಯರೇ ಆಡಳಿತದ ಜೊತೆ ಕೈಜೋಡಿಸುತ್ತಿದ್ದಾರೆ.

ಜಮ್ಮು-ಕಾಶ್ಮೀರದ ಅಪಾರ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಹೂಡಿಕೆ ನಿರ್ಬಂಧನೆಗಳನ್ನು ಸಡಿಲಗೊಳಿಸಲಾಗಿದೆ. ಶ್ರೀನಗರದಲ್ಲಿ ಇತ್ತೀಚೆಗೆ ನಡೆದ ಗಲ್ಫ್ ರಾಷ್ಟ್ರಗಳ ಹೂಡಿಕೆ ಶೃಂಗಸಭೆಯಲ್ಲಿ ದೊಡ್ಡ ದೊಡ್ಡ ಕಂಪನಿಗಳು, ಉದ್ಯಮಿಗಳು ಮತ್ತು ಸಿಇಒಗಳು ಉದ್ಯಮಗಳಲ್ಲಿ ಹೂಡಿಕೆ ಮಾಡಲು ಒಲವು ತೋರಿಸಿದ್ದಾರೆ. ಸಂವಿಧಾನದ 370 ಮತ್ತು 35ಎ ನಿಬಂಧನೆಗಳು ರದ್ದಾದ ಬಳಿಕ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಪ್ರಾಂತ್ಯಗಳು ವೇಗವಾಗಿ ಪ್ರಗತಿಯನ್ನು ಕಾಣುತ್ತಿವೆ.

(ಅನಂತಕುಮಾರ್ ಪ್ರತಿಷ್ಠಾನವು ಇತ್ತೀಚೆಗೆ ಆಯೋಜಿಸಿದ್ದ ದೇಶ ಮೊದಲು ರಾಷ್ಟ್ರೀಯ ಸಂವಾದದಲ್ಲಿ ಮಾಡಿದ ಭಾಷಣದ ಸಂಗ್ರಹ ರೂಪ) ●

ಪುಟ 1 ರಿಂದ

# “ಅದಮ್ಯ ಚೇತನ: ಆದರ್ಶಪ್ರಾಯ ಸಂಸ್ಥೆ”

ಹೆಚ್ಚು ಹೆಚ್ಚು ಜನರಿಗೆ ಈ ಸಂಸ್ಥೆಯ ಸಹಾಯ ಒದಗಲಿ ಎಂದು ನಾವು ಆಶೀರ್ವಾದವನ್ನು ಈ ಸಂದರ್ಭದಲ್ಲಿ ಮಾಡುತ್ತೇವೆ.

ಅದಮ್ಯ ಚೇತನದ ಅಡುಗೆ ಮನೆಯಲ್ಲಿರುವ ಅನ್ನಪೂರ್ಣೇಶ್ವರಿಯ ವಿಗ್ರಹವನ್ನು ಕಾಶಿಯಿಂದ ತಂದದ್ದಾಗಿ ತಿಳಿಸಿದರು. ಅದನ್ನು ನೋಡಿದಾಗ ಹಿಂದೆ 1977ರಲ್ಲಿ ನಮ್ಮ ಗುರುಗಳು ಮತ್ತು ನಮ್ಮ ದೊಡ್ಡಗುರುಗಳಾದ ಜಗದ್ಗುರು ಶ್ರೀ ಶ್ರೀ ಮದಭಿನವ ವಿದ್ಯಾ ತೀರ್ಥರು ಕಾಶಿಯ ಭಕ್ತರ ಆಗ್ರಹದ ಮೇರೆಗೆ ಶೃಂಗೇರಿಯಿಂದ ಕಾಶಿಗೆ ತೆರಳಿ ಅನ್ನಪೂರ್ಣೇಶ್ವರಿಯ ಪ್ರತಿಷ್ಠಾಪನೆ ಮತ್ತು ಕುಂಭಾಭಿಷೇಕ ನಡೆಸಿದ ಘಟನೆ ನೆನಪಾಗುತ್ತದೆ. ಅಂತಹ ಕಾಶೀಕ್ಷೇತ್ರದಿಂದ ತಂದ ಅನ್ನಪೂರ್ಣೇಶ್ವರಿಯ ಸನ್ನಿಧಿಯಲ್ಲಿ ಅನ್ನದಾನದ ಪುಣ್ಯಕಾರ್ಯ ನಡೆಯುತ್ತಿದೆ. ಇಲ್ಲಿ ನಡೆಯುವ ಎಲ್ಲ ಕೆಲಸಗಳೂ ಯಶಸ್ವಿಯಾಗಿ ನೆರವೇರಲಿ ಎಂದು ನಾವು ನಾರಾಯಣಸ್ಮರಣೆ ಪೂರ್ವಕವಾಗಿ ಆಶೀರ್ವಾದ ಮಾಡುತ್ತೇವೆ.

ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರು ಮತ್ತು ಅವರ ಪರಿವಾರದವರಿಗೆ, ವಿಶ್ವಸ್ತಮಂಡಳಿಯ ಸದಸ್ಯರಿಗೆ, ಸಹಾಯ ನೀಡುತ್ತಿರುವ ದಾನಿಗಳಿಗೆ ಹಾಗೂ ಎಲ್ಲ ಸ್ವಯಂಸೇವಕರಿಗೆ ಶಾರದಾ, ಚಂದ್ರಮೌಳೀಶ್ವರ ಮತ್ತು ನಮ್ಮ ಗುರುಗಳ ಪರಿಪೂರ್ಣ ಅನುಗ್ರಹವಿರಲಿ, ಅವರ ಎಲ್ಲ ಕಾರ್ಯಗಳೂ ಯಶಸ್ವಿಯಾಗಿ ನಡೆಯಲಿ ಎಂದು ನಾವು ಆಶೀರ್ವದಿಸುತ್ತೇವೆ. ●







# “ಅವಿಭಾಜ್ಯ ಭಾರತದ ಉಳಿವಿಗೆ ಶಾಸ್ತ್ರದ ಜೊತೆ ಶಸ್ತ್ರವೂ ಬೇಕು”

ಯಾವುದೇ ಕಷ್ಟದ ಸಂದರ್ಭದಲ್ಲಿಯೂ ವಿದ್ಯೆಯನ್ನು ಕಲಿಯಲೇಬೇಕೆಂಬ ಕಾಶ್ಮೀರಿ ಹಿಂದೂಗಳ ವರ್ತನೆಯನ್ನು ಕಾಶ್ಮೀರ ಫೈಲ್ಸ್ ಸಿನಿಮಾದಲ್ಲಿ ವೈಭವೀಕರಿಸಿದ್ದೀರಿ ಎಂಬ ಪ್ರಶ್ನೆ ನನಗೆ ವೇದಿಕೆಯೊಂದರಲ್ಲಿ ಎದುರಾಗಿತ್ತು. ಸಿನಿಮಾದಲ್ಲಿ ಯುವಕನೊಬ್ಬ ಕಾಶ್ಮೀರ ಫೈಲ್ಸ್ ತೆರೆದು ಓದುತ್ತಿದ್ದಾಗ ಅವನಿಗೆ ಸತ್ಯದ ಅರಿವು ಮೂಡುತ್ತದೆ. ಅವನು ಹೊರಗೆ ಬಂದು ಐಎಎಸ್ ಅಧಿಕಾರಿ ಬ್ರಹ್ಮರಿಗೆ “ಯಾವುದು ನ್ಯಾಯ?” ಎಂದು ಪ್ರಶ್ನಿಸುತ್ತಾನೆ. ಆಗ ಬ್ರಹ್ಮ ಉತ್ತರ ನೀಡುವುದಿಲ್ಲ. ಆದರೆ ಅವರ ನೆನಪಿನಲ್ಲಿರುವ ಒಂದು ಘಟನೆ ಮುಂದೆ ಬರುತ್ತದೆ. ಅವರು ಮತ್ತು ಡಿಜಿಪಿ ಹರಿನಾರಾಯಣ್ ಸ್ಥಳಕ್ಕೆ ಹೋದಾಗ ಪಾತಕಿ ಬಿಟ್ಟಾ ಅಲ್ಲಿರುತ್ತಾನೆ. ಬಂದೂಕು ತೆಗೆದುಕೊಂಡು ಅವನನ್ನು ಸುಟ್ಟು ಸಾಯಿಸಬೇಕು ಎಂಬ ಭಾವನೆ ಅವರ ಮನಸ್ಸಿನಲ್ಲಿ ಮೂಡಿತ್ತು. ಆದರೆ ಅವರು ಅದನ್ನು ವ್ಯಕ್ತಪಡಿಸುವುದಿಲ್ಲ.

ಹಿಂದೊಮ್ಮೆ ರಾಮಕೃಷ್ಣ ಹೆಗಡೆಯವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಎರಡನೆಯ ಪಿಯೂಸಿ ಮುಗಿಸಿದ ಪ್ರತಿಯೊಬ್ಬ ಭಾರತೀಯ ಯುವಕಯುವತಿಯರು ಕಡ್ಡಾಯವಾಗಿ ಎರಡು ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಬೇಕು ಎಂಬ ಪ್ರಸ್ತಾಪವನ್ನು ಮುಂದಿಟ್ಟಿದ್ದರು. ಆದರೆ ಆ ವಿಷಯ ಚರ್ಚೆಗೂ ಬರಲಿಲ್ಲ. ಪುಸ್ತಕಗಳು ಮತ್ತು ಸಿನಿಮಾಗಳು ಒಂದು ಜಾಗೃತಿಯನ್ನು ಮಾತ್ರ ಹುಟ್ಟಿಸಬಲ್ಲವು. ಅವು ಕಾಲಾಂತರದಲ್ಲಿ ಕೇವಲ ನೆನಪುಗಳಾಗಿ ಉಳಿಯಬಹುದು.


ಕ್ಷಾತ್ರದ ವಿಷಯದಲ್ಲಿ ಪರ್ವ ನಾಟಕದ ಕೃಷ್ಣ ದ್ವೈಪಾಯನರ ಕಥೆ ನೆನಪಿಸಿಕೊಳ್ಳಬಹುದು. ಅದರ ಒಂದು ದೃಶ್ಯದಲ್ಲಿ ಪ್ರಾಂತ್ಯಪಾಲನೊಬ್ಬ ದುರ್ಯೋಧನನ ಆದೇಶದ ಮೇರೆಗೆ ಆಶ್ರಮದಿಂದ ಹಸುಗಳನ್ನು ಹೊಡೆದುಕೊಂಡು ಹೋಗಲು ಬಂದಿರುತ್ತಾನೆ. ಅದೇ ಸಮಯದಲ್ಲಿ ಭೀಷ್ಮರೂ ಕೂಡ ದ್ವೈಪಾಯನರ ಸಲಹೆ ಪಡೆಯಲು ಅಲ್ಲಿಗೆ ಬಂದಿರುತ್ತಾರೆ. ದ್ವೈಪಾಯನರ ಅನುನಯದ ಮಾತಿಗೆ ಸೊಪ್ಪು ಹಾಕದ ಪ್ರಾಂತ್ಯಪಾಲ ಕೊನೆಗೆ ಭೀಷ್ಮರ ಮಾತುಗಳಿಗೂ ಬೆಲೆ ಕೊಡದೆ ಹಸುಗಳನ್ನು ತುಡುಗು ಮಾಡಿಕೊಂಡು ಹೋಗುತ್ತಾನೆ. ಆಗ ಭೀಷ್ಮರು “ನಿಮ್ಮ ತಾತ ವಸಿಷ್ಠರ ಕಾಲದಲ್ಲಿ ಕೌಶಿಕನು ದಾಳಿಮಾಡಿದಾಗ ಆಶ್ರಮದ ಪ್ರತಿಯೊಬ್ಬರೂ ತಮ್ಮ ಕೈಗೆ ಸಿಕ್ಕಿದ ಆಯುಧಗಳನ್ನು ಹಿಡಿದುಕೊಂಡು ಪ್ರತಿರೋಧ ತೋರಿಸಿದ್ದರು. ದೊಡ್ಡ ದೃಷ್ಟಾರರಾದ ಅವರ ಮಾದರಿಯನ್ನು ತಾವೇಕೆ ಅನುಸರಿಸಲಿಲ್ಲ?” ಎಂದು ಕೃಷ್ಣ ದ್ವೈಪಾಯನರನ್ನು ಕೇಳಿದ್ದರು. ಅದಕ್ಕೆ ಅವರು “ನಾವು ಹೋರಾಟದ ಅಭ್ಯಾಸವನ್ನು ಮರೆತುಬಿಟ್ಟಿದ್ದೇವೆ. ಯಾವುದೇ ಆಯುಧಗಳ ಪ್ರಯೋಗವು ನಮಗೆ ತಿಳಿದಿಲ್ಲ” ಎಂದು ಉತ್ತರಿಸಿದ್ದರು. ಆದುದರಿಂದ, ನಾವು ಅಧ್ಯಯನ ಮತ್ತು ಬೋಧನೆಗಳಲ್ಲಿಯೇ ನಿರತರಾಗಿದ್ದರೆ ಸಾಲದು, ಭವಿಷ್ಯದ ದೃಷ್ಟಿಯಿಂದ ಪ್ರತಿಯೊಬ್ಬರಿಗೂ ಶಸ್ತ್ರಾಸ್ತ್ರಗಳ ಬಳಕೆಯ ತರಬೇತಿ ನೀಡಬೇಕೆ ಎಂದು ಚರ್ಚಿಸುವ ಕಾಲ ಬಂದಿದೆ.

ಏಪ್ರಿಲ್ 22, ಅಂತಾರಾಷ್ಟ್ರೀಯ ತಾಯಿ ದಿನ. ವಿಶ್ವದ 170-175 ದೇಶಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತವೆ. ಭೂಮಿಯನ್ನು ತಾಯಿಯಾಗಿ ಪರಿಗಣಿಸುವ ಪರಿಕಲ್ಪನೆಗೆ ಭಾರತವೇ ಮೂಲ. ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ ಎಂಬ ರಾಮಾಯಣದ ಮಾತನ್ನು ವ್ಯಾಪಕವಾಗಿ ಪ್ರಚಾರ ಮಾಡಿದವರು ಶಂಕರಾಚಾರ್ಯರು. ಕುವೆಂಪುರವರ ಕಾನೂರು ಹೆಗ್ಗಡಿತಿಯಲ್ಲಿ ಮನೆ ಪಾಲಾಗುವ ಸನ್ನಿವೇಶ ಬರುತ್ತದೆ. ಆಗ ಹೂವಯ್ಯನ ತಾಯಿ, ತಮ್ಮ ತುಂಬು ಕುಟುಂಬವನ್ನು ಸ್ಮರಿಸುತ್ತ ಅಂದಿನ ಅವಿಭಾಜ್ಯ ವ್ಯವಸ್ಥೆ ಇಂದು ಛಿದ್ರವಾಗುವ ಹಂತ ತಲುಪಿದೆ ಎಂದು ದುಃಖಿಸುತ್ತಾರೆ. ಆಡಳಿತದ ಅನುಕೂಲಕ್ಕಾಗಿ ನಾವು ಗಡಿಗಳನ್ನು ಹಾಕಿಕೊಳ್ಳಬೇಕು. ಒಂದು ಪ್ರಾಂತ್ಯದ ಸಂಸ್ಕೃತಿಯ ಉಳಿವಿಗಾಗಿ ಮತ್ತು ಪೋಷಣೆಗಾಗಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಿಕೊಂಡಿದ್ದೇವೆ. ಆದರೆ ಇವೇ ಭಾರತದ ಒಕ್ಕೂಟಕ್ಕೆ ಕುಂದು ತರುತ್ತಿವೆಯೇನೋ ಎನ್ನಿಸುತ್ತಿದೆ. ಅರುಂಧತಿ ರಾಯ್ ಅಂಥವರು “ಭಾರತವು ಅನೇಕ ರಾಜ್ಯಗಳನ್ನು ವಸಾಹತುಗಳನ್ನಾಗಿ ಮಾಡಿಕೊಂಡಿದೆ” ಎಂದು ಹೇಳುವ ಧೈರ್ಯ ತೋರಿಸುತ್ತಿದ್ದಾರೆ. 1946ರ ಸಂವಿಧಾನ ಸಭೆಯಲ್ಲಿ ಜವಾಹರಲಾಲ ನೆಹರೂ ಕೂಡ ಇದೇ ರೀತಿಯ ಮಾತನ್ನು ಹೇಳಿದ್ದರು. ಅದರಿಂದಾಗಿಯೇ ಇತರರೂ ಇಂತಹದೇ ಮಾತುಗಳನ್ನಾಡಲು ಪ್ರಾರಂಭಿಸಿದ್ದಾರೆ. ಈ ವಾದವನ್ನು ಬೆಂಬಲಿಸಿದರೆ, ಬೇರೆ ಯಾವುದೋ ರಾಜ್ಯಕ್ಕೆ ವಿಪತ್ತು ಬಂದೊದಗಿದಾಗ ನಾವು ಅದನ್ನು ನೋಡುತ್ತ ಸುಮ್ಮನಿರಬೇಕೆ ಎಂಬ ಪ್ರಶ್ನೆ ಏಳುತ್ತದೆ. ಅವಿಭಾಜ್ಯ ಕುಟುಂಬದಂತೆಯೇ ಅವಿಭಾಜ್ಯ ಭಾರತ ಎಂಬ ಕಲ್ಪನೆಯಾದರೂ ನಮಗಿರಬೇಡವೆ?

ಒಮ್ಮೆ ಹೆಸರಾಂತ ಛಾಯಾಚಿತ್ರಗ್ರಾಹಕ ಶ್ರೀ ಟಿ ಎಸ್ ಸತ್ಯನ್ ಅವರ ಹತ್ತಿರ ನೀವು ಇಷ್ಟೊಂದು ಮಕ್ಕಳ ಚಿತ್ರ ಏಕೆ ತೆಗೆಯುತ್ತೀರಿ ಎಂದು ಕೇಳಿದಾಗ ಅವರ




ಕಣ್ಣಲ್ಲಿ ನೀರು ಬಂದಿತು. ಅವರು “ಯಾವ ಮಗುವೂ ಯಾರ ಮಗುವೂ ಅಲ್ಲ; ಪ್ರತಿಯೊಂದು ಮಗುವೂ ಎಲ್ಲರ ಮಗು” ಎಂದು ಉತ್ತರಿಸಿದ್ದರು. ನಾವು ಈ ರೀತಿಯಾಗಿ ಭಾರತದ ಪರಿಕಲ್ಪನೆಯನ್ನು ಇಟ್ಟುಕೊಳ್ಳಬೇಕು ಕಾಶ್ಮೀರಕ್ಕೆ ಬಂದೊದಗಿದ ಕಷ್ಟವು ನಮಗಾಗಿರುವ ಕಷ್ಟ ಎನ್ನಿಸಬೇಕು, ಆಗ ಇಂತಹ ತಪ್ಪು ಮತ್ತೆ ಘಟಿಸುವುದಿಲ್ಲ. ಇಲ್ಲಿನ ಕಾಶ್ಮೀರ ಭವನದಂತೆ ನಾವು ಕರ್ನಾಟಕ ಭವನವನ್ನು ಕಾಶ್ಮೀರದಲ್ಲಿ ನಿರ್ಮಿಸಬೇಕು. ಈ ಬೇಡಿಕೆಯನ್ನು ಸರಕಾರ ಪರಿಗಣಿಸಬೇಕು. ನಮ್ಮ ರಾಜ್ಯದ ಗೃಹ ಮಂತ್ರಿ ಅರಗ ಜ್ಞಾನೇಂದ್ರ ಅವರ ಕ್ಷಾತ್ರವನ್ನು ರಾಜ್ಯ ನೋಡಿದೆ. ಒಮ್ಮೆ ಇಸ್ರೇಲಿನಿಂದ ತಜ್ಞರು ಬಂದು ಬೆಂಗಳೂರಿನ ಕಸವನ್ನು ಕೊಂಡು ನಿರ್ವಹಣೆ ಮಾಡುತ್ತೇವೆ ಎಂದು ಹೇಳಿದಾಗ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ವಿಜಯಕುಮಾರ್ ಅವರ ಪ್ರಯತ್ನಗಳನ್ನು ಗಾರ್ಬೇಜ್ ಮಾಫಿಯಾ ವಿಫಲಗೊಳಿಸಿತ್ತು. ಅದೇ ರೀತಿ ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದ ವಾಹನಗಳನ್ನು ಎಳೆದುಕೊಂಡು ಹೋಗುವ ಮಾಫಿಯಾವನ್ನು ಗೃಹ ಸಚಿವರು ಒಂದೇ ದಿನದಲ್ಲಿ ಪಳಗಿಸಿದರು. ಕಾಶ್ಮೀರದಲ್ಲಿ ನಾವು ಇಂದು ಭೂಮಿಯನ್ನು ಕೊಳ್ಳಬಹುದಾಗಿದೆ. ಆದರೆ ನಮಗೆ ಭಯವಿದೆ. ಹೀಗಾಗಿ, ಎಲ್ಲಾ ರಾಜ್ಯಗಳು ಕಾಶ್ಮೀರದಲ್ಲಿ ತಮ್ಮ ರಾಜ್ಯಗಳ ಭವನಗಳನ್ನು ನಿರ್ಮಿಸಬೇಕು, ಫೆಸ್ಟಿವಲ್ ಆಫ್ ಭಾರತ್ ಎಂಬ ಉತ್ಸವವನ್ನು ಕಾಶ್ಮೀರದಲ್ಲಿ ಪ್ರತಿವರ್ಷ ನಡೆಸಬೇಕು. ಎಲ್ಲ ರಾಜ್ಯಗಳು ಇದನ್ನು ಪ್ರಾಯೋಜಿಸಿ ತಮ್ಮ ಜನರನ್ನು ಅದರಲ್ಲಿ ಭಾಗವಹಿಸುವಂತೆ ಮಾಡಬೇಕು. ದಕ್ಷಿಣ ಭಾರತದಲ್ಲಿ ರಾಷ್ಟ್ರೀಯ ಪ್ರಜ್ಞೆ ಇರುವ ಕರ್ನಾಟಕ ಸರಕಾರವು ಈ ದಿಸೆಯಲ್ಲಿ ಪ್ರಥಮ ಹೆಜ್ಜೆಯಿರಿಸಬೇಕು ಎಂದು ನನ್ನ ಅನಿಸಿಕೆ.



**ಪ್ರಕಾಶ್ ಬೆಳವಾಡಿ**
ಕಲಾವಿದರು ಹಾಗೂ ಪತ್ರಕರ್ತರು

ಯಾವುದೇ ಚಿಕ್ಕ ಕೆಲಸವನ್ನು ಮಾಡಲು ಪ್ರಾರಂಭಿಸಿದರೂ ಅದು ದೊಡ್ಡದಾಗಿ ಬೆಳೆಯುವ ಸಾಧ್ಯತೆ ಇರುತ್ತದೆ ಎಂದು ನನ್ನ ನಂಬಿಕೆ. ಕಾಶ್ಮೀರ ಫೈಲ್ಸ್ ಸಿನಿಮಾ ನಿರ್ಮಿಸಿದವರು ವೆಚ್ಚ ಮಾಡಿದ್ದು ಕೇವಲ ಎಂಟು ಕೋಟಿ ರೂಪಾಯಿಗಳು. ಆದರೆ ಯಾವುದೇ ಪ್ರಚಾರದ ಸಹಾಯವಿಲ್ಲದ ಈ ಸಿನಿಮಾವನ್ನು ಪ್ರೇಕ್ಷಕರೇ ಗೆಲ್ಲಿಸಿದರು. ಒಂದು ಸಣ್ಣ ಪ್ರಯತ್ನವನ್ನೂ ಬೃಹತ್ತಾಗಿ ಬಿಂಬಿಸಿದರು. ಆದುದರಿಂದ ಸರಕಾರ ತೆಗೆದುಕೊಳ್ಳುವ ಒಂದೊಂದು ಕ್ರಮವನ್ನೂ ಜನರು ಬೆಂಬಲಿಸಿ ಗೆಲ್ಲಿಸುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ.

(ಅನಂತಕುಮಾರ್ ಪ್ರತಿಷ್ಠಾನವು ಏರ್ಪಡಿಸಿದ್ದ ದೇಶ ಮೊದಲು ಕಾರ್ಯಕ್ರಮಸರಣಿಯ “ ನಮ್ಮ ಕಾಶ್ಮೀರ ನಮ್ಮ ಹೊಣೆ” ಸಂವಾದದಲ್ಲಿ ಮಾಡಿದ ಭಾಷಣದ ಸಂಗ್ರಹ) ●

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: **8884182415**

ಪುಟ 2 ರಿಂದ

## ಅನಂತ ಪ್ರೇರಣಾ ಕೇಂದ್ರ - ನಾಡ ಸೇವಕರಿಗೆ ದಾರಿದೀಪ



### ಗ್ರಂಥಾಲಯ

ಅನಂತ ಪ್ರೇರಣಾ ಕೇಂದ್ರದಲ್ಲಿ ತೆರೆಯಲಾಗುವ ಗ್ರಂಥಾಲಯದಲ್ಲಿ ಅನಂತಕುಮಾರರ ಸಂಗ್ರಹದ ಪುಸ್ತಕಗಳೂ, ಇತಿಹಾಸ, ಜೀವನ ಚರಿತ್ರೆ, ಧಾರ್ಮಿಕ, ರಾಜಕೀಯ, ಆಡಳಿತ ನಿರ್ವಹಣೆ, ಸಾಹಿತ್ಯ ಮತ್ತಿತರ ವಿಷಯಗಳಿಗೆ ಸಂಬಂಧಿಸಿದ ಅನೇಕ ಮೌಲಿಕ ಗ್ರಂಥಗಳೂ ಇವೆ.

ಅನಂತಕುಮಾರರಿಗೆ ಬಹು ಮೆಚ್ಚಿನ ಅಧ್ಯಯನ ವಿಷಯಗಳಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆ, ಇತಿಹಾಸಗಳೂ ಸೇರಿವೆ. ಕೇಂದ್ರದ ಗ್ರಂಥಭಂಡಾರದಲ್ಲಿ ಈ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳ ಸಂಗ್ರಹಕ್ಕೆ ಹೆಚ್ಚಿನ ಆದ್ಯತೆ ನೀಡುವ ಉದ್ದೇಶವಿದೆ. ನಾಡಿನ ಇತಿಹಾಸ, ಪರಂಪರೆ, ದೇವಾಲಯ ಶಿಲ್ಪಕಲೆ, ವಾಸ್ತುಶಿಲ್ಪ, ಸಾಂಸ್ಕೃತಿಕ ಚರಿತ್ರೆಗಳಿಗೆ ಸಂಬಂಧಿಸಿದ ಅಧ್ಯಯನ ಮಾಡುವವರಿಗೆ ಅಗತ್ಯವಾದ ಪೂರಕಗ್ರಂಥಗಳು ಒಂದೆಡೆ ಲಭ್ಯವಾಗುವಂತೆ ಮಾಡುವುದು ಕೇಂದ್ರದ ಆಶಯವಾಗಿದೆ. ಸಾರ್ವಜನಿಕರಿಗೆ ಗ್ರಂಥಾಲಯದ ಬಳಕೆಗೆ ಯಾವುದೇ ಶುಲ್ಕವಿರುವುದಿಲ್ಲ. ಬೆಳಗಿನ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಾಚನಾಲಯದಲ್ಲಿ ಕುಳಿತು ಗ್ರಂಥಗಳನ್ನು ಅಧ್ಯಯನ ಮಾಡುವುದಕ್ಕೆ ಮುಕ್ತ ಅವಕಾಶವಿದೆ.

### ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ

ಸೌತ್ ಎಂಡ್ ವೃತ್ತದ ಪರಿಸರದಲ್ಲಿ ಅನೇಕ ಶಿಕ್ಷಣಸಂಸ್ಥೆಗಳಿದ್ದು ದೂರದೂರದಿಂದ ಇಲ್ಲಿಗೆ ಪ್ರತಿನಿತ್ಯ ಅನೇಕ ವಿದ್ಯಾರ್ಥಿಗಳು ಬರುತ್ತಾರೆ. ಇವರಲ್ಲಿ ಅನೇಕರಿಗೆ ಮಧ್ಯಾಹ್ನದ ಊಟಕ್ಕೆ ಬೇಕಾದ ಅನುಕೂಲವಿರುವುದಿಲ್ಲ. ಅಂತಹ ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ಅದಮ್ಯ ಚೇತನದ ಸಹಯೋಗದೊಡನೆ ಪ್ರತಿನಿತ್ಯ ಮಧ್ಯಾಹ್ನದ ಭೋಜನವನ್ನು ಉಚಿತವಾಗಿ ನೀಡಲಾಗುತ್ತಿದೆ. ಪ್ರೇರಣಾಕೇಂದ್ರದ ಮೇಲುಮಹಡಿಯ ಆವರಣದಲ್ಲಿ ಊಟದ ವಿತರಣೆಗಾಗಿ ಸೂಕ್ತವ್ಯವಸ್ಥೆ ಕಲ್ಪಿಸಲಾಗಿದೆ.

### ಗಿಡ ವಿತರಣೆ

ಸಸ್ಯಾಗ್ರಹ ಎಂಬ ಪರಿಕಲ್ಪನೆಯನ್ನು ಮುಂದಿಟ್ಟು ಅನಂತಕುಮಾರ್ ಬೆಂಗಳೂರು ಹಸಿರು ಪರಿಸರದ ಸ್ವಚ್ಛ ನಗರವಾಗಬೇಕೆಂಬ ಕನಸು ಕಂಡಿದ್ದವರು. ಅವರು ಪ್ರಾರಂಭಿಸಿದ ಹಸಿರು ಭಾನುವಾರ ಎಂಬ ಗಿಡ ನೆಡುವ ಕಾರ್ಯಕ್ರಮ 350 ಕ್ಕೂ ಹೆಚ್ಚು ವಾರಗಳಿಂದ ನಿರಂತರವಾಗಿ ನಡೆದುಬರುತ್ತಿದೆ. ತಮ್ಮ ಆವರಣದಲ್ಲಿ ಗಿಡ ನೆಟ್ಟು ಬೆಳೆಸಲು ಆಸಕ್ತಿಯುಳ್ಳ ಸಾರ್ವಜನಿಕರಿಗೆ ಗಿಡಗಳನ್ನು ಉಚಿತವಾಗಿ ವಿತರಿಸಲು ಪ್ರೇರಣಾ ಕೇಂದ್ರದ ಆವರಣದಲ್ಲಿ ವ್ಯವಸ್ಥೆ ಮಾಡಲಾಗಿದೆ.

### ಸಂಸ್ಕೃತಿ-ಪರಂಪರೆ ಪ್ರಸಾರ

ಭಾರತೀಯ ಪರಂಪರೆ, ಸಂಸ್ಕೃತಿ, ಕಲೆ ಮೊದಲಾದವುಗಳ ಬಗ್ಗೆ ಅಪಾರ ಆಸಕ್ತಿಯುಳ್ಳವರಾಗಿದ್ದ ಅನಂತಕುಮಾರರ ಆಶಯಕ್ಕನುಗುಣವಾಗಿ ಈ ಪ್ರೇರಣಾ ಕೇಂದ್ರದಲ್ಲಿ ಮುಂಬರುವ ದಿನಗಳಲ್ಲಿ ಸಂಸ್ಕೃತಿ ಘಟಕವೊಂದನ್ನು ಪ್ರಾರಂಭಿಸಲು ಯೋಚಿಸಲಾಗುತ್ತಿದೆ. ಈ ಘಟಕವು ಪರಂಪರೆಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ಹಮ್ಮಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು.



### ಪ್ಲೇಟ್ ಬ್ಯಾಂಕ್

ಹಸಿರು ಜೀವನ ಶೈಲಿಯ ಪ್ರತಿಪಾದಕರಾದ ಅನಂತಕುಮಾರ್ ಸಭೆ ಸಮಾರಂಭಗಳಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಖರೀದಿಯನ್ನು ವಿರೋಧಿಸಿ, ಮರುಬಳಸಬಹುದಾದ ಸ್ಟೀಲ್ ಲೋಟ ತಟ್ಟೆ ಚಮಚಗಳ ಬಳಕೆಗೆ ಪ್ರೇರಣೆ ನೀಡಿದ ಫಲವಾಗಿ ಅದಮ್ಯ ಚೇತನದಲ್ಲಿ ಪ್ಲೇಟ್ ಬ್ಯಾಂಕ್ ಯೋಜನೆ ಪ್ರಾರಂಭವಾಗಿದೆ. ಸಾರ್ವಜನಿಕರು ತಾವು ಏರ್ಪಡಿಸುವ ಸಮಾರಂಭಗಳಲ್ಲಿ ಬಳಕೆಗೆ ಇಲ್ಲಿಂದ ಲೋಟ ತಟ್ಟೆಗಳನ್ನು ಉಚಿತವಾಗಿ ಒಯ್ದು ಉಪಯೋಗಿಸಿ ಹಿಂತಿರುಗಿಸಬಹುದಾದ ಷರತ್ತುಬದ್ಧ ಯೋಜನೆ ಇದಾಗಿದೆ. ಪ್ಲೇಟ್ ಬ್ಯಾಂಕಿನ ಒಂದು ಶಾಖೆಯನ್ನು ಪ್ರೇರಣಾ ಕೇಂದ್ರದ ಆವರಣದಲ್ಲಿ ತೆರೆಯಲಾಗಿದೆ.

### ಪುಸ್ತಕ ನಿಧಿ

ಸರ್ಕಾರ ಮತ್ತು ಖಾಸಗಿ ಉದ್ದಿಮೆಗಳಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿಗಾಗಿ ಆಗಿಂದಾಗ್ಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ದ್ವಿತೀಯ ದರ್ಜೆ ಸಹಾಯಕರಿಂದ ಮೊದಲುಗೊಂಡು ಕೆಎಎಸ್, ಐಎಎಸ್ ಗಳಂತಹ ಉನ್ನತ ಹುದ್ದೆಗಳವರೆಗೆ ನೇಮಕಾತಿಗಾಗಿ ನಡೆಯುವ ಈ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ಅಭ್ಯರ್ಥಿಗಳಿಗೆ ನೆರವಾಗಲು ಅನಂತ ಪ್ರೇರಣಾ ಕೇಂದ್ರ ಮುಂದಾಗಿದೆ.

ಉದ್ಯೋಗಾಕಾಂಕ್ಷಿಗಳು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವುದಕ್ಕೆ ನೆರವು ನೀಡುವ ವಿಶೇಷ ಪುಸ್ತಕ ನಿಧಿ (ಬುಕ್ ಬ್ಯಾಂಕ್) ಯೋಜನೆಯನ್ನು ಈ ಕೇಂದ್ರದಲ್ಲಿ ಸ್ಥಾಪಿಸಲಾಗುತ್ತಿದೆ. ಕೆಳ ಹಂತದ ಉದ್ಯೋಗಗಳಿಂದ ಉನ್ನತ ಹುದ್ದೆಗಳವರೆಗೆ ಉದ್ಯೋಗಕ್ಕೆ ಸೇರಲಿಚ್ಛಿಸುವ ಅಭ್ಯರ್ಥಿಗಳು ಪರೀಕ್ಷೆಗೆ ಸಿದ್ಧತೆ ನಡೆಸಲು ಅಗತ್ಯವಾದ ಪುಸ್ತಕಗಳನ್ನೂ, ನಿಯತಕಾಲಿಕಗಳನ್ನೂ ಈ ಕೇಂದ್ರದಲ್ಲಿ ಒದಗಿಸಲಾಗುವುದು. ಪರೀಕ್ಷಾರ್ಥಿಗಳಿಗೆ ಪುಸ್ತಕ ನಿಧಿಯ ಬಳಕೆ ಉಚಿತವಾಗಿದ್ದು, ಯಾವುದೇ ಶುಲ್ಕವಿರುವುದಿಲ್ಲ. ●

ಅನಂತಪ್ರೇರಣಾ ಕೇಂದ್ರದ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಲ್ಲದೆ, ತಮ್ಮತಮ್ಮ ಮೌಲಿಕವಾದ ಕಾರ್ಯಾನುಭವಗಳನ್ನು ಹಂಚಿಕೊಳ್ಳುವಂತೆ ಸಹೃದಯರಲ್ಲಿ ಕೋರಿಕೆ.

ಅನಂತಪ್ರೇರಣಾ ಕೇಂದ್ರಕ್ಕೆ ಭೇಟಿ ಕೊಡಲು, ಇಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು, ಕಾರ್ಯಕ್ರಮಗಳ ಏರ್ಪಾಡಿಗೆ ಕೈಜೋಡಿಸಲು ತಮಗೆಲ್ಲ ಸ್ವಾಗತ.

ಕೇಂದ್ರವು ವಾರದ ದಿನಗಳಲ್ಲಿ ಬೆಳಗಿನ 9.30 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ತೆರೆದಿರುತ್ತದೆ. ಪ್ರವೇಶ ಉಚಿತ.

ಅನಂತ ಪ್ರೇರಣಾ ಕೇಂದ್ರ
ಅದಮ್ಯ ಚೇತನ
ಸೌತ್ ಎಂಡ್ ವೃತ್ತ
ಜಯನಗರ, ಬೆಂಗಳೂರು

ಸಂಪರ್ಕ ಸಂಖ್ಯೆ: 8904623967

# ಕಲಬುರ್ಗಿ ಜಿಲ್ಲೆಯ ಹಲವು ದೇಗುಲಗಳು (ಭಾಗ 2)

ದೇಗುಲದರ್ಶನ ಮಾಲಿಕೆ - 11



ಅದಮ್ಯ ಚೇತನ ಅರ್ಪಿಸುವ ಕರ್ನಾಟಕ ದೇಗುಲ ದರ್ಶನ ಮಾಲಿಕೆಯ 11 ನೆಯ ಕಾರ್ಯಕ್ರಮದಲ್ಲಿ ಕಲಬುರ್ಗಿ ಜಿಲ್ಲೆಯ ಇನ್ನಷ್ಟು ಪುರಾತನ ದೇಗುಲಗಳನ್ನು ಪರಿಚಯಿಸುತ್ತಿದ್ದೇವೆ.

ಆಳಂದ- ಕಲಬುರ್ಗಿ ಜಿಲ್ಲೆಯ ತಾಲೂಕುಕೇಂದ್ರಗಳಲ್ಲೊಂದು. ಇಲ್ಲಿರುವ ಪಾರ್ಶ್ವನಾಥ ದೇವಾಲಯ ಪುರಾತನವಾದದ್ದು. ಊರ ನಡುವಿನ ಹನುಮಂತನ ಗುಡಿಯೂ ಪ್ರಸಿದ್ಧವಾಗಿದೆ.

ಆಳಂದದಿಂದ 15 ಕಿಮೀ ದೂರದ ತಡಕಲ್ ಎಂಬ ಗ್ರಾಮದಲ್ಲಿ ಹಲವು ಪ್ರಾಚೀನ ಗುಡಿಗಳನ್ನು ಕಾಣಬಹುದು. ಇವುಗಳಲ್ಲಿ ಮಲ್ಲಿಕಾರ್ಜುನ ದೇವಾಲಯ ಮತ್ತು ಜಿನಬಸದಿಗಳು ಸೇರಿವೆ. ಜಿನಬಸದಿಯಲ್ಲಿರುವ ಸರಸ್ವತೀ ದೇವಿಯ ವಿಗ್ರಹ ಅತ್ಯಂತ ಆಕರ್ಷಕವಾದ ಶಿಲಾಪ್ರತಿಮೆಗಳಲ್ಲೊಂದು ಎಂದರೆ ಅತಿಶಯವಲ್ಲ.





ಆಳಂದದಿಂದ 30 ಕಿಮೀ ದೂರದ ಚಿಂಚನಸೂರು ಕಲ್ಯಾಣ ಚಾಲುಕ್ಯರ ಕಾಲದ ಒಂದು ಪ್ರಮುಖ ಕೇಂದ್ರವಾಗಿತ್ತು. ಇಲ್ಲಿರುವ ಬ್ರಹ್ಮೇಶ್ವರ ಗುಡಿ 12ನೇ ಶತಮಾನಕ್ಕೆ ಸೇರಿದೆ. ಗುಡಿಯ ಹೊರಗೋಡೆಗಳ ಮೇಲಿನ ಹಲವು ದೇವತಾಶಿಲ್ಪಗಳೂ ಶಿಲಾಬಾಲಿಕೆಯರ ಮೂರ್ತಿಗಳೂ ಆಕರ್ಷಕವಾಗಿವೆ.

ಚಿಂಚನಸೂರಿನ ಸಮೀಪದಲ್ಲಿರುವ ಮಾಪುರತಾಯಿಯ ದೇಗುಲದ ಇತಿಹಾಸ ಜನಪದರ ಐತಿಹ್ಯ, ಕತೆಗಳೊಡನೆ ಬೆಸೆದುಕೊಂಡಿದೆ. ಇಲ್ಲಿಗೂ ಭಕ್ತಾದಿಗಳು ಬಹುಸಂಖ್ಯೆಯಲ್ಲಿ ಭೇಟಿನೀಡುತ್ತಾರೆ.

ಆಳಂದದಿಂದ 30 ಕಿಮೀ ದೂರದಲ್ಲಿರುವ ನರೋಣಾ ಎಂಬ ಊರು ಕ್ಷೇತ್ರಪಾಲ ಸ್ಥಾನವೆಂಬ ಖ್ಯಾತಿಗೆ ಪಾತ್ರವಾಗಿದೆ. ಇಲ್ಲಿ ಅಷ್ಟತೀರ್ಥಗಳಿವೆ. ವಿಶಾಲವಾದ ಆವರಣದಲ್ಲಿರುವ ಕ್ಷೇಮಲಿಂಗೇಶ್ವರ ಗುಡಿಯಲ್ಲಿ ನಿತ್ಯಪೂಜಾದಿಗಳು ಸಲ್ಲುತ್ತವೆ.

ಕಲಬುರ್ಗಿಯಿಂದ ಪಶ್ಚಿಮಕ್ಕೆ 27 ಕಿಮೀ ದೂರದಲ್ಲಿರುವ ಹುಣಸಿ ಹಡಗಿಲ ಗ್ರಾಮದ ಬಸದಿಯಲ್ಲಿರುವ ಪಾರ್ಶ್ವನಾಥನ ವಿಗ್ರಹ ಪುರಾತನವಾದುದು. ಇದೇ ಗ್ರಾಮದಲ್ಲಿರುವ ಅಲ್ಲಮಪ್ರಭು ದೇವಾಲಯದಲ್ಲಿ ಶಿವಲಿಂಗವೊಂದನ್ನು ಇರಿಸಲಾಗಿದೆ.






ಕಲ್ಬುರ್ಗಿಯ ದಕ್ಷಿಣಕ್ಕೆ ಯಾದಗಿರಿ ಜಿಲ್ಲೆಗೆ ಸೇರಿದಂತಿರುವ ಏವೂರು ಅನೇಕ ದೇವಾಲಯಗಳ ಬೀಡು. ಇಲ್ಲಿರುವ ಪುರಾತನ ಗುಡಿಗಳಲ್ಲಿ ಬಾವಿ ಬಸವಣ್ಣನ ಗುಡಿ, ಮಲ್ಲಿಕಾರ್ಜುನ ದೇಗುಲ ಮತ್ತು ಸ್ವಯಂಭೂ ಸೋಮೇಶ್ವರ ಗುಡಿಗಳು ಪ್ರಮುಖವಾದವು.

ಶಹಾಪುರ ತಾಲೂಕಿಗೆ ಸೇರಿದ ಗೋಗಿ ಗ್ರಾಮದಲ್ಲಿ 12ನೇ ಶತಮಾನಕ್ಕೆ ಸೇರಿದ ಚಂದ್ರನಾಥ ತೀರ್ಥಂಕರರ ಬಸದಿಯಿದೆ. ●

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**

ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ನೋಡಲು ಬೇಕಾದ ಲಿಂಕ್ ಇಲ್ಲಿದೆ:
http://YouTube.com/AnanthkumarPratishthana







# ಹೂವಿನ ಹಿಲಾಲು – ಅಶೋಕ

ಸಸ್ಯಲೋಕ ಪರಿಚಯ ಮಾಲಿಕೆ- 8



ಭಾರತೀಯ ಮೂಲದ ಅಶೋಕ ವೃಕ್ಷವು ಪುರಾಣಗಳ ಕಾಲದಿಂದಲೂ ಸಾಹಿತ್ಯದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿದೆ. ರಾಮಾಯಣದಲ್ಲಿ ರಾವಣನು ಸೀತೆಯನ್ನು ಅಪಹರಿಸಿ ಅಶೋಕವನದಲ್ಲಿ ಇರಿಸಿದ್ದನು. ಅಶೋಕ ವೃಕ್ಷವು ಹಿಂದೂಗಳಿಗೆ ಪವಿತ್ರವಾಗಿರುವಂತೆಯೇ ಬೌದ್ಧ ಮತ್ತು ಜೈನ. ಧರ್ಮಿಯರಿಗೂ ಪೂಜನೀಯವಾಗಿದೆ. ಗೌತಮ ಬುದ್ಧನು 'ಅಶೋಕವನ' ದಲ್ಲಿ ಹುಟ್ಟಿದನೆಂದು ಪ್ರತೀತಿಯಿದೆ. ಹಾಗಾಗಿ ಬೌದ್ಧವಿಹಾರಗಳಲ್ಲಿ ಈ ಮರಕ್ಕೆ ವಿಶೇಷ ಪ್ರಾಮುಖ್ಯತೆ. ಕಾಮದೇವನಿಗೆ ಈ ಮರವನ್ನು ಕಂಡರೆ ಪ್ರಾಣವಂತೆ.

ಆದಿಕವಿ ಪಂಪನು ತನ್ನ ಎರಡು ಕಾವ್ಯಗಳಲ್ಲಿ ಅಶೋಕವನ್ನು ಅಸುಗೆ, ರಕ್ತಾಶೋಕ ಎಂದು ಬಗೆ ಬಗೆಯಾಗಿ ವರ್ಣಿಸಿದ್ದಾನೆ. ಕಾಳಿದಾಸನು "ಮಾಲವಿಕಾಗ್ನಿಮಿತ್ರ" ದಲ್ಲಿ ರಾಜಕುಮಾರಿ ಮಾಲವಿಕೆಯು ತನ್ನ ಪಾದಗಳಿಂದ ದೋಹದವೆಸಗಿದ ಐದನೆಯ ದಿನಕ್ಕೆ ಮರ ಹೂತಳೆಯಿತೆಂದು ಬರೆದಿದ್ದಾನೆ.



ಅಶೋಕದ ಸಸ್ಯಶಾಸ್ತ್ರೀಯ ಹೆಸರು - Saraca Indica, Saraca Asoca. ಇದು ಅಬೇಸೇ ಕುಟುಂಬವರ್ಗಕ್ಕೆ ಸೇರಿದೆ. ಬೇರೆಬೇರೆ ಭಾಷೆಗಳಲ್ಲಿ ಅಶೋಕವೃಕ್ಷವನ್ನು ಕಂಕೇಲಿ, ವಕುಳ, ಅಸೋಗ, ಅಶೋಪಾಲವ, ಹೇಮಪುಷ್ಪ, ಆಸಾಕಾ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

## ಅಶೋಕವೃಕ್ಷದ ಲಕ್ಷಣಗಳು

ಅಶೋಕ ವೃಕ್ಷವು ನಿಧಾನವಾಗಿ ಬೆಳೆಯುವ ಮಧ್ಯಮ ಗಾತ್ರದ ನಿತ್ಯ ಹಸುರಿನ ಸುಂದರವಾದ ಮರ. ಇದು ಸುಮಾರು 7 - 8 ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಅಶೋಕವೃಕ್ಷದ ಪುಷ್ಪ ವೈಭವವು ಅದರ ನಿಜವಾದ ಸೌಂದರ್ಯ. ನೀಳವಾಗಿ ಚೂಪಾಗಿರುವ ಎಲೆಗಳಿಂದ ಕೂಡಿದ ಮರದ ತುಂಬಾ ಗೊಂಚಲು ಗೊಂಚಲು ಕೆಂಪು ಹಳದಿಯ ಹೂಗಳು ಮನಸ್ಸಿಗೆ ಮುದನೀಡುತ್ತವೆ. ಅಶೋಕದ ಹೂಗಳು ಅರಳುವ ಪರಿ ಅತಿಮೋಹಕ. ಮರದ ತುಂಬಾ ಗೊಂಚಲುಗಳೇ. ಪ್ರತಿಯೊಂದು ಗೊಂಚಲಿನಲ್ಲಿ ಅನೇಕ ಪುಟ್ಟಪುಟ್ಟ ಹೂಗಳಿರುತ್ತವೆ. ಈ ಹೂಗಳಿಗೆ ನಾಲ್ಕು ದಳಗಳು. ಹೂವಿನ ಮಧ್ಯೆ ನೀಳವಾದ ಕೇಸರಗಳಿರುತ್ತವೆ. ಅರಳುವ ಸಮಯದಲ್ಲಿ ಹೂಗಳು ಕಿತ್ತಳೆ ಹಳದಿ ಬಣ್ಣದಲ್ಲಿದ್ದು, ಮಾರನೆಯ ದಿನ ಹವಳದಂತೆ ಕಡುಕೆಂಪು ಬಣ್ಣಕ್ಕೆ ತಿರುಗುತ್ತವೆ. ಒಂದೇ ಗೊಂಚಲಿನಲ್ಲಿ ಗೋಚರಿಸುವ ಎರಡು ಬಣ್ಣಗಳ ವೈವಿಧ್ಯವು ನೋಡುಗರನ್ನು ಮೂಗಿನಮೇಲೆ ಬೆರಳಿಡುವಂತೆ ಮಾಡುತ್ತದೆ. ಹೂಗಳಲ್ಲಿ ನರುಗಂಪಿನ ನಸುಲೇಪವಿರುವಂತೆ ಭಾಸವಾಗುತ್ತದೆ. ಸಂಜೆಯಾಗುತ್ತಿದ್ದಂತೆ ಆ ಪರಿಮಳ ಗಾಢವಾಗುತ್ತಾ ಹೋಗುತ್ತದೆ.

ಅಶೋಕವು ಕಂದು ಬಣ್ಣದ ಕಾಯಿಗಳನ್ನು ಬಿಡುತ್ತದೆ. ಹತ್ತು ಸೆಂಟಿಮೀಟರ್ ಉದ್ದವಾಗಿರುವ ಕಾಯಿಗಳ ಒಳಗಡೆ ಸಾಲಾಗಿ ಬೀಜಗಳಿರುತ್ತವೆ. ಈ ಮರಗಳು ಸಮುದ್ರಮಟ್ಟದಿಂದ 2000 - 3000 ಅಡಿ ಎತ್ತರವಿರುವ ಪೂರ್ವ, ಈಶಾನ್ಯ ಭಾರತದ ಕಾಡುಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿಯೂ ವಿಶೇಷವಾಗಿ ಕಾಣಬರುವ ಸಸ್ಯವಿದು. ಇವುಗಳನ್ನು ಬೀಜಗಳ ಮೂಲಕ ನಮ್ಮ ಅಂಗಳದಲ್ಲೂ ಸುಲಭವಾಗಿ ಬೆಳೆಸಬಹುದು. ಅನೇಕ ಬೀಜಗಳನ್ನು ಬಿತ್ತಿದರೆ ಎಲ್ಲೋ ಒಂದು ಬೀಜ ಗಿಡವಾಗಿ ಬೆಳೆಯುತ್ತದೆ.

## ಔಷಧೀಯ ಗುಣಗಳು

ಚರಕ ಸಂಹಿತೆಯಲ್ಲಿ ಅಶೋಕವೃಕ್ಷದ ಔಷಧೀಯ ಗುಣಗಳ ಉಲ್ಲೇಖವಿದೆ. ಆಯುರ್ವೇದದ ಗ್ರಂಥಗಳು ಅಶೋಕವೃಕ್ಷಗಳನ್ನು ಮನಸಾರೆ ಕೊಂಡಾಡಿವೆ. ಮರದ ತೊಗಟೆ, ಎಲೆ, ಹೂ, ಬೀಜಗಳನ್ನು ಒಣಗಿಸಿ ತೊಗಟೆಯನ್ನು ಪುಡಿಮಾಡಿ ಬಳಸುತ್ತಾರೆ. ಎಲೆ, ಹೂ, ಕಾಯಿ, ತೊಗಟೆ, ಬೇರು ಪಂಚಾಂಗ ಸಹಿತ ಔಷಧಿಯಾಗಿ ಉಪಯುಕ್ತ. ಅದರಲ್ಲೂ ಸ್ತ್ರೀಯರಿಗೆ ಸಂಬಂಧಿಸಿದ ವ್ಯಾಧಿಗಳಿಗೆ ರಾಮಬಾಣ. ಮಹಿಳೆಯರ ಋತುಸ್ರಾವದ ಎಲ್ಲ ಸಮಸ್ಯೆಗಳಿಗೂ ಏಕೈಕ ಸಂಜೀವಿನಿಯಿದು. ಹೀಗಾಗಿ ಭಾರತ ಹಾಗೂ ಶ್ರೀಲಂಕಾದ ಅನೇಕ ಪ್ರಾಂತ್ಯಗಳಲ್ಲಿ ಪ್ರೇಮಿಗಳು ತಮ್ಮ ಪ್ರೀತಿ ಅಮರವಾಗಲೆಂದು ಈ ವೃಕ್ಷಕ್ಕೆ ಪ್ರದಕ್ಷಿಣೆ ಹಾಕಿ ಮುಡುಪು ಕಟ್ಟಿ ಪೂಜಿಸುತ್ತಾರೆ.

ಅಶೋಕಮರದ ಚಕ್ಕೆ, ಹೂವು ಮತ್ತು ಎಲೆಗಳಿಂದ ಕಷಾಯ ಮಾಡಿ ಸೇವಿಸಬಹುದು. ಹಾಲಿನ ಜೊತೆ ಅಥವಾ ಜೇನುತುಪ್ಪದಲ್ಲಿ ತೆಗೆದುಕೊಳ್ಳಬಹುದು. ಅಶೋಕ ವೃಕ್ಷ ಬೀಜದ ಚೂರ್ಣವನ್ನು ಸೇವಿಸುವುದರಿಂದ ಮೂತ್ರ ಪಿಂಡದಲ್ಲಿನ ಕಲ್ಲು ಕರಗುತ್ತದೆ, ಮೂತ್ರಕ್ಕೆ ಸಂಬಂಧಿಸಿದ ವ್ಯಾಧಿಗಳು ತ್ವರಿತವಾಗಿ ನಿವಾರಣೆಯಾಗುತ್ತವೆ. 'ಅಶೋಕಾರಿಷ್ಟ, ಅಶೋಕಘೃತ' ಎಂಬ ಔಷಧಿಗಳನ್ನು ನಾವು ಆಯುರ್ವೇದದ ಅಂಗಡಿಗಳಲ್ಲಿ ಕಾಣಬಹುದು. ಮರದ ತೊಗಟೆಯಲ್ಲಿ 'ಟ್ಯಾನಿನ್' ಅಂಶವಿದೆ. ತೊಗಟೆಯ ಪುಡಿಯನ್ನು ಸ್ವಲ್ಪ ಸೇರಿಸುವುದರಿಂದ ಚಹದ ರುಚಿ ಹಾಗೂ ಬಣ್ಣದಲ್ಲಿ ಹೆಚ್ಚುವುದೆಂದು ಹೇಳುತ್ತಾರೆ.

ಬಂಗಾಲಿ ಹೆಣ್ಣುಮಕ್ಕಳು, ಹೂವಿನ ಮೊಗ್ಗುಗಳನ್ನು ಸೇವಿಸುತ್ತಾರಂತೆ. ಬಲಿತಮರದ ಚಕ್ಕೆಯ ಹಾಲುಕಷಾಯ ಕುಡಿದ ನಮ್ಮ ತಾಯಂದಿರ, ಕಿಶೋರಿಯರ ಗರ್ಭಕೋಶದ ಆರೋಗ್ಯ ಹಿಂದಿನ ತಲೆಮಾರಿನಲ್ಲಿ ಉತ್ತಮವಾಗಿರುತ್ತಿತ್ತು.

## ಅತಿಬಳಕೆಯ ಪರಿಣಾಮ

ಅಶೋಕವೃಕ್ಷವನ್ನು ಔಷಧ ಭಂಡಾರ ಎಂದು ಕರೆದರೂ ತಪ್ಪಿಲ್ಲ. ಅಶೋಕದ ಕೆಂಪು ಹೂವಿನ ಗೊಜ್ಜು, ತಂಬುಳಿಯ ಪರಿಚಯ ಹಿಂದಿನ ತಲೆಮಾರಿಗಿತ್ತು. ಇಂದಿಗೂ ಶ್ರೀಲಂಕಾದ ಅಡಿಗೆಯಲ್ಲಿ ಇವನ್ನು ಬಳಸಲಾಗುತ್ತಿದೆ. ಹೀಗಾಗಿ, ಅವುಗಳ ಅತಿ ಬಳಕೆಯ ಯುಗ ಆರಂಭಗೊಂಡಿತು. ಪರಿಣಾಮವಾಗಿ, ಇಂದು ನಮ್ಮ ಕಾಡುಗಳಲ್ಲಿ ಅಶೋಕವೃಕ್ಷವು ವಿನಾಶದ ಅಂಚಿಗೆ ತಲುಪಿದೆ. ಇದನ್ನು ಮನಗೊಂಡ ಭಾರತಸರ್ಕಾರದ ತೋಟಗಾರಿಕೆ ಇಲಾಖೆಯು ಇತ್ತೀಚೆಗೆ ಈ ಮರಗಳನ್ನು ಉದ್ಯಾನವನಗಳಲ್ಲಿ ಅಲಂಕಾರಿಕವಾಗಿ ಬೆಳೆಸುವುದರ ಜೊತೆಗೆ ರಸ್ತೆಬದಿಗಳಲ್ಲಿ ಸಾಲುಮರಗಳಾಗಿಯೂ ಬೆಳೆಸುತ್ತಿದೆ. ಬೆಂಗಳೂರಿನ ಲಾಲ್ ಬಾಗ್ ಉದ್ಯಾನವನದಲ್ಲಿ ಅನೇಕ ಅಶೋಕದ ಮರಗಳನ್ನು ನೋಡಬಹುದು.

## ಕುವೆಂಪು ಮತ್ತು ಅಶೋಕ

ಆಧುನಿಕ ಕವಿಗಳಿಗೂ ಈ ಮರ ಹಾಗೂ ಇದರ ಹೂಗೊಂಚಲುಗಳ ಮೇಲೆ ಎಲ್ಲಿಲ್ಲದ ಆಸಕ್ತಿ. ಮಹಾಕವಿ ಕುವೆಂಪು ಈ ಮರದ ಹೂಗಳ ವಿನ್ಯಾಸಕ್ಕೆ ಮಾರುಹೋಗಿ ಕವಿತೆಯನ್ನು ರಚಿಸಿದ್ದಾರೆ.

"ದೀವಟಿಗೆ ಹಿಡಿರೆಂದು ತರು ಹಸ್ತಗಳಿಗಿತ್ತು ಹೂವಿನ ಹಿಲಾಲುಗಳ ಹೊತ್ತಿಸಿರಲಲ್ಲಿ ಜ್ವಲಿಸುತಿವೆ ನೋಡದೊ ಅಶೋಕ ಹೂ ವೇಷದಲ್ಲಿ!
ಕಾಡಿನ ಕತ್ತಲೆಯಲ್ಲಿ ಗಿಡಮರಗಳು ತಾರೆಗಳನ್ನು ರಕ್ತವರ್ಣದಲ್ಲಿ ಅದ್ದಿ ಗೊಂಚಲು ನೇಯ್ದು ಹಿಡಿದ ದೀವಟಿಗೆಯಂತೆ ಕವಿಗೆ ಗೋಚರಿಸಿದೆ!"

ನಾವು ಸಾಮಾನ್ಯವಾಗಿ ಅಶೋಕ ಎಂದು ಕರೆಯುವ ಎತ್ತರದ ಮರವು ಅಶೋಕದ ಒಂದು ಜಾತಿ ಅಷ್ಟೆ. ಅದನ್ನು ಕೇವಲ ಅಲಂಕಾರಕ್ಕಾಗಿ ಬೆಳೆಸುತ್ತಾರೆ. ಹೆಸರೇ ಹೇಳುವಂತೆ, ಶೋಕವಿಲ್ಲದ ಮರ, ಅಶೋಕ. ಎಲ್ಲರಿಗೂ ಸುಖ,ಶಾಂತಿ, ಆರೋಗ್ಯಗಳನ್ನು ಕೊಡುವ ಈ ವೃಕ್ಷವನ್ನು ಭಾರತೀಯರು ಪವಿತ್ರವೆಂದು ಪರಿಗಣಿಸುತ್ತಾರೆ.




ಛಾಯಾ ಓಕ್ ಬಾಪಟ್

ವ್ಯಕ್ತಿ ವಿಶೇಷ ಮಾಲಿಕೆ

# ಡಾ. ಕೇಶವ ಬಲಿರಾಮ್ ಹೆಡಗೆವಾರ್

-ಕೆ. ಜನಾರ್ದನ ತುಂಗ



1889ನೆಯ ಇಸವಿಯು ಭಾರತದಲ್ಲಿ ಇಬ್ಬರು ಮಹಾನ್ ನಾಯಕರು ಜನಿಸಿದ ವರ್ಷ. ಅವರಲ್ಲಿ ಒಬ್ಬರು ಸ್ವಾತಂತ್ರ್ಯಾನಂತರ ತಾವೇ ಪ್ರಧಾನಿಯಾಗಿ ತಮ್ಮ ಪೀಳಿಗೆಯಲ್ಲಿಯೇ ಅಧಿಕಾರವನ್ನು ಉಳಿಸಿಕೊಂಡವರು. ಇನ್ನೊಬ್ಬರು ಪ್ರಧಾನಿ ಪಟ್ಟಕ್ಕೆ ಯೋಗ್ಯರಾದ ವ್ಯಕ್ತಿಗಳನ್ನು ರೂಪಿಸುವ ಸಂಸ್ಥೆಯನ್ನು ಕಟ್ಟಿದವರು. ಆ ಎರಡನೆಯವರೇ, ಡಾ. ಕೇಶವ ಬಲಿರಾಮ್ ಹೆಡಗೆವಾರ್.

01/04/1889, ಯುಗಾದಿಯ ದಿನದಂದೇ ನಾಗಪುರದ ದೇಶಸ್ಥ ಬ್ರಾಹ್ಮಣರ ಕುಟುಂಬದಲ್ಲಿ ಹೊಸಯುಗದ ಹರಿಕಾರನ ಜನನವಾಯಿತು. ತಂದೆ ಬಲಿರಾಮ್ ಪಂತ್ ಹೆಡಗೆವಾರ್ ಮತ್ತು ತಾಯಿ ರೇವತಿ ಬಾಯಿ ಇಬ್ಬರನ್ನೂ ತಮ್ಮ ಹದಿಮೂರನೆಯ ವಯಸ್ಸಿನಲ್ಲಿ ಕಳೆದುಕೊಂಡ ಹೆಡಗೆವಾರ್ ಹಸಿವೆ, ಬಡತನಗಳಿಗೆ ಮಣಿಯದೆ ಸ್ವಾಭಿಮಾನದಿಂದ ಬದುಕಿದರು. ನಾಗಪುರ ಮತ್ತು ಪುಣೆಯಲ್ಲಿ ಆರಂಭಿಕ ವಿದ್ಯಾಭ್ಯಾಸ ಮುಗಿಸಿ ಮುಂದಿನ ವೈದ್ಯಕೀಯ ವ್ಯಾಸಂಗಕ್ಕಾಗಿ ಅವರು ಕಲ್ಕತ್ತಾ ನಗರಕ್ಕೆ ತೆರಳಿದರು.

1917ರಲ್ಲಿ ವ್ಯಾಸಂಗವನ್ನು ಮುಗಿಸಿ ನಾಗಪುರಕ್ಕೆ ವಾಪಸಾದ ಹೆಡಗೆವಾರ್ ವೃತ್ತಿಯಲ್ಲಿ ತೊಡಗುವುದರ ಬದಲು 'ಕ್ರಾಂತಿದಳ'ವನ್ನು ಸ್ಥಾಪಿಸಿ ಬ್ರಿಟಿಷರ ವಿರುದ್ಧ ಜನರನ್ನು ಸಂಘಟಿಸತೊಡಗಿದರು. ಆದರೆ, ಅವರ ಸಂಪರ್ಕಕ್ಕೆ ಬಂದ ಯುವಕರಲ್ಲಿ ದೀರ್ಘಕಾಲದ ಹೋರಾಟಕ್ಕೆ ಬೇಕಾದ ಬದ್ಧತೆಯಿರಲಿಲ್ಲ. ಈ ಅನುಭವವೇ ಅವರಿಗೆ ಮುಂದೆ ಸಂಘದ ಸ್ಥಾಪನೆಗೆ ಪ್ರೇರಣೆ ನೀಡಿರಬೇಕು.

ಮುಂದೆ ಅವರು ಕಾಂಗ್ರೆಸ್ ಪಕ್ಷದ ಸ್ವಯಂಸೇವಾ ಘಟಕವಾಗಿದ್ದ 'ಹಿಂದುಸ್ಥಾನಿ ಸೇವಾ ದಳ'ವನ್ನು ಸೇರಿದರು. 1920ರಲ್ಲಿ ಸ್ನೇಹಿತ ಡಾ. ಪರಾಂಜಪೆಯವರು ಅಧ್ಯಕ್ಷರಾಗಿದ್ದಾಗ ಅವರು ಅದರ ಕಾರ್ಯದರ್ಶಿಯಾದರು. ಅವರಿಬ್ಬರೂ ಜೊತೆಯಾಗಿ ಕಾಂಗ್ರೆಸ್ ಪಕ್ಷದಲ್ಲಿ ಕಾರ್ಯಕರ್ತರ ಪಡೆಯನ್ನು ನಿರ್ಮಾಣಮಾಡಬೇಕೆಂದು ಬಯಸಿದ್ದರು. ಆದರೆ ಹಿರಿಯ ನಾಯಕರ ಬೆಂಬಲ ದೊರೆಯದೆ ಅದು ಸಾಧ್ಯವಾಗಲಿಲ್ಲ. 1919ರ ಹೊತ್ತಿಗೆ ಭಾರತದಲ್ಲಿ ಖಿಲಾಫತ್ ಚಳವಳಿಯು ಪ್ರಾರಂಭವಾಯಿತು. 1920ರಲ್ಲಿ ಗಾಂಧೀಜಿಯ ನೇತೃತ್ವದಲ್ಲಿ ನಡೆದ ಅಸಹಕಾರ ಚಳವಳಿಯ ಉದ್ದೇಶಗಳಲ್ಲಿ ಖಿಲಾಫತ್ ಮರುಸ್ಥಾಪನೆಯ ವಿಷಯವನ್ನು ಸೇರಿಸಿಕೊಂಡಿದ್ದರಿಂದ ಹೆಡಗೆವಾರ್ ಅಸಮಾಧಾನಗೊಂಡಿದ್ದರು. ಈ ಮೊದಲು ಕಲ್ಕತ್ತಾದಲ್ಲಿ ಪಠಾಣರು ಹಿಂದೂಗಳ ಮೇಲೆ ದೌರ್ಜನ್ಯವೆಸಗಿದಾಗ ಹಿಂದೂಗಳು ನಿರ್ವೀರ್ಯರಂತೆ ವರ್ತಿಸಿದ್ದನ್ನು ನೋಡಿ ಅವರು ನೊಂದುಕೊಂಡಿದ್ದರು.

ಸಹಜವಾಗಿಯೇ ಹೆಡಗೆವಾರ್ ಅಸಹಕಾರ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲಿಲ್ಲ. ಮುಂದೆ ಚೌರಿಚೌರಾ ದುರಂತ ಸಂಭವಿಸಿ ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಂಡ ಮೇಲೂ ಖಿಲಾಫತ್ ಚಳವಳಿ ಮುಂದುವರೆದು ಹಿಂದೂಗಳ ವಿರುದ್ಧ ಹಿಂಸಾಚಾರ ಪ್ರಾರಂಭವಾಯಿತು. ಗಾಂಧೀಜಿಯೂ ಸೇರಿದಂತೆ ಎಲ್ಲ ಕಾಂಗ್ರೆಸ್ ಮುಖಂಡರು ಮುಸ್ಲಿಂ ದೌರ್ಜನ್ಯದ ವಿರುದ್ಧ ಮೌನ ತಾಳಿದರು. ಹೆಡಗೆವಾರ್ ಅಖಂಡ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆಯಲು, ಹಿಂದೂ ಧರ್ಮ ಮತ್ತು ಹಿಂದೂ ರಾಷ್ಟ್ರದ ರಕ್ಷಣೆಗಾಗಿ ಹಿಂದೂಗಳನ್ನು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ನೆಲೆಯಲ್ಲಿ ಸಂಘಟಿಸಿ ರಾಷ್ಟ್ರಪ್ರೇಮದಿಂದ ತುಂಬಿದ ಪಡೆಯೊಂದನ್ನು ನಿರ್ಮಾಣ ಮಾಡುವುದು ಅಗತ್ಯ ಎಂದು ಭಾವಿಸಿ 1925ರ ವಿಜಯದಶಮಿಯ ಶುಭದಿನದಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಪ್ರಾರಂಭಿಸಿದರು.

ಡಿಸೆಂಬರ್, 25, 1934ರಂದು ವಾರ್ಧಾಕ್ಕೆ ಬಂದಿದ್ದ ಗಾಂಧೀಜಿ ಅಲ್ಲಿ ನಡೆಯುತ್ತಿದ್ದ ಸಂಘದ ಶಿಬಿರವನ್ನು ಸ್ವಯಂಪ್ರೇರಿತರಾಗಿ ಸಂದರ್ಶಿಸಿದರು. ಅದರ ಸಂಸ್ಥಾಪಕರು ಕಾಂಗ್ರೆಸ್ ಸೇವಾದಲದ ಕಾರ್ಯದರ್ಶಿಯಾಗಿದ್ದುದನ್ನು ನೆನೆಸಿಕೊಂಡು "ಇಂತಹ ಒಂದು ಸ್ವಯಂಸೇವಾ ಸಂಸ್ಥೆಯನ್ನು ಕಾಂಗ್ರೆಸ್ ನಂತಹ ಜನಪ್ರಿಯ ಸಂಸ್ಥೆಯ ಆಶ್ರಯದಲ್ಲಿ ಕಟ್ಟುವುದು ಬಿಟ್ಟು ಬೇರೆಯೇ ಸಂಸ್ಥೆಯನ್ನು ಏಕೆ ಕಟ್ಟಿದಿರಿ?" ಎಂದು ಹೆಡಗೆವಾರರನ್ನು ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ, ಹೆಡಗೆವಾರರು "ನಾನು ಮತ್ತು ಡಾ. ಪರಾಂಜಪೆಯವರು 1920ರಲ್ಲಿ ಕಾಂಗ್ರೆಸಿನ ಸೇವಾದಲದಲ್ಲಿದ್ದುದು ನಿಜ. ಆಗ ನಾವು ಕಾಂಗ್ರೆಸಿನ ಅಧೀನದಲ್ಲಿಯೇ ಒಂದು ಸ್ವಯಂಸೇವಕರ ಪಡೆಯನ್ನು ಕಟ್ಟಲು ಪ್ರಯತ್ನಿಸಿದ್ದೆವು. ಆದರೆ ಪ್ರೋತ್ಸಾಹದ ಕೊರತೆಯಿಂದ ನಮಗೆ ಯಶಸ್ಸು ದೊರೆಯಲಿಲ್ಲ. ಆದುದರಿಂದ ಈ ರೀತಿಯ ಸಂಸ್ಥೆಯನ್ನು ಸ್ವತಂತ್ರವಾಗಿ ಕಟ್ಟಬೇಕಾಯಿತು" ಎಂದಿದ್ದರು. ಅಂದು ಸಂಘದ ಶಿಸ್ತು, ಕಾರ್ಯವೈಖರಿ ಮತ್ತು ರಾಷ್ಟ್ರಪ್ರೇಮವನ್ನು ಗಾಂಧೀಜಿ ಮುಕ್ತಕಂಠದಿಂದ ಪ್ರಶಂಸೆ ಮಾಡಿದ್ದರು. ಕ್ರಾಂತಿದಳದ ಸ್ಥಾಪನೆಗೆ ಮೊದಲು ಹೆಡಗೆವಾರರು ಬಂಕಿಮಚಂದ್ರರ ಬರವಣಿಗೆಗಳಿಂದ ಪ್ರೇರಿತವಾಗಿ ಪ್ರಾರಂಭವಾಗಿದ್ದ ಅನುಶೀಲನ ಸಮಿತಿಯ ಸದಸ್ಯರಾಗಿ ಕ್ರಾಂತಿಕಾರಿಗಳಿಗೆ ಆಯುಧಗಳನ್ನು ಒದಗಿಸುತ್ತಿದ್ದುದಲ್ಲದೆ ಅವರ ಚಟುವಟಿಕೆಗಳಿಗೆ ಧನಸಂಗ್ರಹವನ್ನೂ ಮಾಡುತ್ತಿದ್ದರು. ಕ್ರಾಂತಿಕಾರಿ ಸಾಹಿತ್ಯವನ್ನು ಪ್ರಚಾರಮಾಡುತ್ತಿದ್ದರು. ಈ ಎಲ್ಲ ಚಟುವಟಿಕೆಗಳಿಗಾಗಿ ಮತ್ತು ಮಹಾರಾಷ್ಟ್ರದ ಕಟೋಲ್ ಮತ್ತು ಭರತ್‌ವಾಡಾಗಳಲ್ಲಿ ಮಾಡಿದ ಭಾಷಣಗಳಿಗಾಗಿ 1921ರಲ್ಲಿ ಬ್ರಿಟಿಷ್ ಸರಕಾರವು ದೇಶದ್ರೋಹದ ಆಪಾದನೆಯನ್ನು ಹೊರಿಸಿ ಅವರನ್ನು ಸೆರೆಮನೆಗೆ ತಳ್ಳಿತು.

ಗಾಂಧೀಜಿಯವರ ನಿಲುವುಗಳ ಕುರಿತು ಭಿನ್ನಾಭಿಪ್ರಾಯ ಹೊಂದಿದ್ದರೂ ಹೆಡಗೆವಾರರು ವೈಯಕ್ತಿಕ ನೆಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉದ್ದೇಶ ಚಾರಿತ್ರ್ಯ ನಿರ್ಮಾಣ ಮಾತ್ರವಾಗಿದ್ದುದರಿಂದ ಸಂಘವು ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲಿಲ್ಲ. ಆದರೆ, ಸಂಘದ ಎಲ್ಲ ಸ್ವಯಂಸೇವಕರಿಗೆ ವೈಯಕ್ತಿಕ ನೆಲೆಯಲ್ಲಿ ಚಳವಳಿಯಲ್ಲಿ ಭಾಗವಹಿಸಲು ಅವರು ಅನುಮತಿ ನೀಡಿದರು.

ಸಂಘದ ಚಟುವಟಿಕೆಗಳನ್ನು ಕೇವಲ ಚಾರಿತ್ರ್ಯನಿರ್ಮಾಣ ಮತ್ತು ಹಿಂದುತ್ವ, ಹಿಂದೂ ಸಂಸ್ಕೃತಿಗಳ ಪುನರುತ್ಥಾನಕ್ಕೆ ಸೀಮಿತಗೊಳಿಸಿ ರಾಜಕೀಯದಿಂದ ದೂರವಿರಿಸುವಲ್ಲಿ ಹೆಡಗೆವಾರರು ಯಶಸ್ವಿಯಾದರು. ಭಾರತದ ಸ್ವಾತಂತ್ರ್ಯಹೋರಾಟವು ಕೇವಲ ಬ್ರಿಟಿಷರ ವಿರುದ್ಧದ ಹೋರಾಟವಲ್ಲ, ಜಗತ್ತಿನ ಅತ್ಯಂತ ಪುರಾತನವಾದ ಸಂಸ್ಕೃತಿಯನ್ನು ಪುನರುತ್ಥಾನ ಮಾಡಿ ಹಿಂದೂರಾಷ್ಟ್ರವನ್ನು ಸ್ಥಾಪಿಸುವುದೇ ಆಗಿದೆ ಎಂದು ಅವರು ನಂಬಿದ್ದರು.

ಒಂದು ಧ್ವಜದ ಮಹತ್ವವನ್ನು ತಿಳಿಯಲು ಚರಿತ್ರೆಯನ್ನು ಗಮನಿಸಬೇಕು. ಶಿವಾಜಿ ಮತ್ತು ಇತರ ಅನೇಕ ಹಿಂದೂ ರಾಜರಿಗೆ ಪ್ರೇರಕ ಶಕ್ತಿಯಾಗಿದ್ದುದು, ಭಗವಾಧ್ವಜ. ಇದು ಭಾರತೀಯತೆಯ, ಸನಾತನ ಸಂಸ್ಕೃತಿಯ ಪ್ರತೀಕ. ಕೇಸರಿ ಬಣ್ಣವು ತ್ಯಾಗ, ವೈಭವ ಮತ್ತು ಸಾಹಸ ಪ್ರವೃತ್ತಿಗಳನ್ನು ಪ್ರತಿನಿಧಿಸುತ್ತದೆ. ಅಗ್ನಿಯಂತೆ ಶುದ್ಧೀಕರಿಸುವ, ಸೂರ್ಯನಂತೆ ಅಜ್ಞಾನದ ಅಂಧಕಾರವನ್ನು ಹೊಡೆದೋಡಿಸುವ ಸಂಕೇತ, ಭಗವಾಧ್ವಜ. ಭಗವಾಧ್ವಜಕ್ಕೆ ಎಲ್ಲರನ್ನೂ ಒಂದುಗೂಡಿಸುವ ಶಕ್ತಿಯಿದೆ. ಈ ಹಿನ್ನೆಲೆಯಲ್ಲಿ ಭಗವಾಧ್ವಜವನ್ನು ಸಂಘದ ಧ್ವಜವನ್ನಾಗಿ ಹೆಡಗೆವಾರರು ಸ್ವೀಕರಿಸಿದರು. 1930ರ ಜನವರಿ 26ರಂದು ಕಾಂಗ್ರೆಸ್ ಪಕ್ಷ ದೇಶದೆಲ್ಲೆಡೆ ತ್ರಿವರ್ಣಧ್ವಜವನ್ನು ಹಾರಿಸಿದರೆ, ಹೆಡಗೆವಾರರು ಭಗವಾಧ್ವಜವನ್ನು ಹಾರಿಸುವುದರ ಮೂಲಕ ಕಾಂಗ್ರೆಸಿನ ತ್ರಿವರ್ಣ ಧ್ವಜಕ್ಕೆ ಎಲ್ಲರನ್ನೂ ಒಂದುಗೂಡಿಸುವ ಶಕ್ತಿಯಿಲ್ಲವೆಂದು ಸೂಚಿಸಿದರು.

ಭಗವಾಧ್ವಜದ ಅಡಿಯಲ್ಲಿ ನೆರೆಯುವ ಸ್ವಯಂಸೇವಕರಲ್ಲಿ ಜಾತಿಮತ ಭೇದವಿರುವುದಿಲ್ಲ. ಇಲ್ಲಿ ವ್ಯಕ್ತಿಯ ಚಾರಿತ್ರ್ಯನಿರ್ಮಾಣಕ್ಕೆ ಮಾತ್ರ ಆದ್ಯತೆ. ಈ ಏಕತತ್ತ್ವನಿಷ್ಠೆಯಿಂದಾಗಿ ಸಂಘವು ಇಂದು ಭಾರತದ ಮೂಲೆಮೂಲೆಗಳಲ್ಲಿ ಮಾತ್ರವಲ್ಲದೆ ಜಗತ್ತಿನ 40 ದೇಶಗಳಲ್ಲಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಂಡಿದ್ದು ಜಗತ್ತಿನ ಅತಿದೊಡ್ಡ ಸರಕಾರೇತರ ಸ್ವಯಂಸೇವಾ ಸಂಸ್ಥೆಯಾಗಿದೆ.

ರಾಷ್ಟ್ರನಿರ್ಮಾಣದ ಕಾರ್ಯದಲ್ಲಿ ಮಹಿಳೆಯರನ್ನು ತೊಡಗಿಸುವ ನಿಟ್ಟಿನಲ್ಲಿ ಹೆಡಗೆವಾರರು ನೀಡಿದ ಸಲಹೆಯಂತೆ, ಶ್ರೀಮತಿ ಲಕ್ಷ್ಮೀ ಬಾಯಿ ಕೇಳ್ಕರ್ ಅವರ ನೇತೃತ್ವದಲ್ಲಿ 1936ರ ಅಕ್ಟೋಬರ್, 25 ರಂದು ಸ್ವತಂತ್ರ ರಾಷ್ಟ್ರಸೇವಿಕಾ ಸಮಿತಿಯು ವಾರ್ಧಾದಲ್ಲಿ ಪ್ರಾರಂಭವಾಯಿತು.

ತಮ್ಮ ಕೊನೆಯ ದಿನಗಳಲ್ಲಿ ಅನಾರೋಗ್ಯಪೀಡಿತರಾಗಿದ್ದ ಹೆಡಗೆವಾರರು ಸರಸಂಘಚಾಲಕತ್ವಕ್ಕೆ ಶ್ರೀ ಎಂ ಎಸ್ ಗೋಳ್ವಲ್ಕರರನ್ನು ನಿಯೋಜಿಸಿದರು. 1940ರಲ್ಲಿ ಸಂಘದ ವಾರ್ಷಿಕ ಸಂಘ ಶಿಕ್ಷಾ ವರ್ಗವನ್ನು ಸಂಬೋಧಿಸುತ್ತ "ಇಂದು ನನ್ನ ಕಣ್ಣೆದುರು ಸ್ವತಂತ್ರ ಹಿಂದೂರಾಷ್ಟ್ರದ ಕಿರು ಪ್ರತಿರೂಪ ಮೂಡುತ್ತಿದೆ" ಎಂದು ಹೇಳಿದ ಮಾತು ಕೆಲವೇ ವರ್ಷಗಳಲ್ಲಿ ಸೀಮಿತವಾದ ರೀತಿಯಲ್ಲಿ ನಿಜವಾಯಿತು. ಬೆನ್ನುನೋವಿನಿಂದ ಪೀಡಿತರಾಗಿದ್ದ ಹೆಡಗೆವಾರರು 1940ರ ಜೂನ್ 21ರಂದು ರಾಜಗೀರ್‌ನಲ್ಲಿ ನಿಧನರಾದರು.

ಭಾರತದ ಜನಪ್ರಿಯ ಹಾಗೂ ಯಶಸ್ವೀ ಪ್ರಧಾನ ಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಮತ್ತು ಶ್ರೀ ನರೆಂದ್ರ ಮೋದಿಯವರು ಹೆಡಗೆವಾರರ ಮುಂಗಾಣ್ಕೆಯ ಫಲಗಳು ಎಂಬುದರಲ್ಲಿ ಸಂಶಯವಿಲ್ಲ. ದಿವಂಗತ ರಾಷ್ಟ್ರಪತಿ ಪ್ರಣಬ್ ಕುಮಾರ್ ಮುಖರ್ಜಿಯವರು ಹೆಡಗೆವಾರರನ್ನು "ಭಾರತಮಾತೆಯ ಶ್ರೇಷ್ಠ ಪುತ್ರ" ಎಂದು ವರ್ಣಿಸಿರುವುದು ಅತಿಶಯೋಕ್ತಿಯಲ್ಲ. ●

# ಅದಮ್ಯಚೇತನ ತಿಂಗಳ ವರದಿ (16 ಮೇ 2022 ರಿಂದ 15 ಜೂನ್ 2022)

## ಶೃಂಗೇರಿ ಜಗದ್ಗುರುಗಳ ಭೇಟಿ

ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳಾದ ಶ್ರೀ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮಿಯವರು ದಿನಾಂಕ 27 ಮೇ 2022 ರಂದು ಅದಮ್ಯಚೇತನದ ಅನ್ನಪೂರ್ಣ ಅಡುಗೆ ಮನೆಗೆ ಭೇಟಿ ನೀಡಿ ಎಲ್ಲ ಚಟುವಟಿಕೆಗಳನ್ನು ವೀಕ್ಷಿಸಿ ಸಂತೋಷ ವ್ಯಕ್ತಪಡಿಸಿದರು. ಶ್ರೀಗಳವರ ದರ್ಶನಾಕಾಂಕ್ಷಿಗಳು ನೆರೆದಿದ್ದ ಸಭೆಯನ್ನು ಉದ್ದೇಶಿಸಿ ಅನುಗ್ರಹ ಭಾಷಣಮಾಡಿದ ಜಗದ್ಗುರುಗಳು ಅದಮ್ಯಚೇತನದ ಕಾರ್ಯಚಟುವಟಿಕೆಗಳನ್ನು ಪ್ರಶಂಸಿಸಿ ಎಲ್ಲರನ್ನೂ ಆಶೀರ್ವದಿಸಿದರು. ಅದಮ್ಯಚೇತನದ ಮುಖ್ಯಸ್ಥರಾದ ಡಾ. ತೇಜಸ್ವಿನಿ ಅನಂತಕುಮಾರ್ ಪೂಜ್ಯರನ್ನು ಸ್ವಾಗತಿಸಿದರು. ಅದಮ್ಯಚೇತನದ ಟ್ರಸ್ಟಿಯವರಾದ ಶ್ರೀ ಹೆಚ್. ಎನ್. ನಂದಕುಮಾರ್ ಸಂಸ್ಥೆಯ ಪರವಾಗಿ ಶ್ರೀಗಳವರಿಗೆ ಫಲಸಮರ್ಪಣೆಯ ಮೂಲಕ ಗೌರವ ಸಲ್ಲಿಸಿದರು. ಶೃಂಗೇರಿ ಮಠದ ಧರ್ಮಾಧಿಕಾರಿಯವರಾದ ಪದ್ಮಶ್ರೀ ಗೌರಿಶಂಕರ್ , ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

## ಇತರ ಗಣ್ಯರ ಭೇಟಿ

ಅಗಸ್ತ್ಯ ಫೌಂಡೇಶನ್ ತಂಡದ ಮುಖ್ಯಸ್ಥರಾದ ಶ್ರೀ ಪಿ ಕುಮಾರ್, ಶಿಕ್ಷಣತಜ್ಞ ಶ್ರೀ ರಾಮಕುಮಾರ್, ಹಿರಿಯ ಆಡಳಿತ ವ್ಯವಸ್ಥಾಪಕರಾದ ಶ್ರೀ ಬಾಲಕೃಷ್ಣ, ಶ್ರೀ ಕುಮಾರ್, ಶ್ರೀ ಪ್ರಶಾಂತ್ ಮೊದಲಾದವರು 4 ಮೇ 2022 ರಂದು ಅದಮ್ಯಚೇತನದ ಅಡುಗೆ ಮನೆಗೆ ಭೇಟಿ ನೀಡಿದ್ದರು. ಅಕ್ಷರದಾಸೋಹ ವಿಭಾಗದ ಮುಖ್ಯಾಧಿಕಾರಿ ಶ್ರೀಮತಿ ನಾಗರತ್ನ ಮತ್ತು ಸಹಶಿಕ್ಷಣಾಧಿಕಾರಿ, ಶ್ರೀಮತಿ ವೀಣಾರವರು ಅದಮ್ಯಚೇತನಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಅಂತೆಯೇ ರೇವಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಕಾರ್ತಿಕ, ಸವಿತಾ, ಡಾ.ರಿತೇಶ್ ಮತ್ತು ಅವರು ಸ್ನೇಹಿತರು ಅದಮ್ಯಚೇತನದ ಅಡುಗೆ ಮನೆಗೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳ ಬಗೆಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

## ಹಸಿರು ಭಾನುವಾರ

ಅದಮ್ಯ ಚೇತನದ ಹಸಿರು ಭಾನುವಾರದ ಕಾರ್ಯಕ್ರಮವು ನಿರಂತರವಾಗಿ ಸಾಗುತ್ತಿದೆ. 334 ನೇ ಹಸಿರು ಭಾನುವಾರ ಕಾರ್ಯಕ್ರಮವು ಮೇ 22 ರಂದು ಎಚ್ .ಎಸ್. ಆರ್ ಲೇ ಔಟ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಜರುಗಿತು. 335 ನೇ ಹಸಿರು ಭಾನುವಾರ ಕಾರ್ಯಕ್ರಮವು ಹನುಮಂತ ನಗರದ ಮದ್ದೂರಮ್ಮ ಮೈದಾನದ ಆವರಣದಲ್ಲಿ ಜರುಗಿತು. 336 ನೇ ಹಸಿರು ಭಾನುವಾರ ಜೂನ್ 05 ವಿಶ್ವ ಪರಿಸರ ದಿನದಂದು ಬಂದದ್ದು ವಿಶೇಷವಾಗಿತ್ತು. ವಿಶ್ವ ಪರಿಸರ ದಿನದ ಅಂಗವಾಗಿ ಅದಮ್ಯ ಚೇತನದ ಆವರಣದಲ್ಲಿ ಸಾರ್ವಜನಿಕರಿಗೆ ಸಸಿಗಳನ್ನು ವಿತರಣೆ ಮಾಡಿದ್ದಲ್ಲದೆ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ನೂರಾರು ಗಿಡಗಳನ್ನು ನೆಡಲಾಯಿತು. ಹಾಗೂ ಬಿಎಂಎಸ್ ಕಾಲೇಜಿನ ವಿದ್ಯಾರ್ಥಿ ಕಾರ್ಯಕರ್ತರು ಸುಮಾರು 5000 ಸಸಿಗಳನ್ನು ಅರಣ್ಯ ಇಲಾಖೆಯಿಂದ ಸಂಗ್ರಹಿಸಿ ಅದಮ್ಯ ಚೇತನದ ನರ್ಸರಿಗೆ ಸಾಗಿಸಲು ನೆರವಾದರು. ಯಲಹಂಕದ ರೈಲ್ವೆ ಗಾಲಿ ಮತ್ತು ಅಚ್ಚು ಕಾರ್ಖಾನೆ ಆವರಣದಲ್ಲಿ ಅನಂತಕುಮಾರ್ ಅವರ ನೆನಪಿಗೆ ಸಸಿಯೊಂದನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಕಾರ್ಖಾನೆಯ ಅಧಿಕಾರಿಗಳು ಭಾಗವಹಿಸಿದ್ದರು. 337 ನೇ ಹಸಿರು ಭಾನುವಾರ ಕಾರ್ಯಕ್ರಮವು ಎನ್.ಜಿ.ಇ.ಎಫ್ ಲೇಔಟ್ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಆಚರಿಸಿಲಾಯಿತು. ಅದಮ್ಯಚೇತನ ಸಂಸ್ಥೆಯ ಸಹಯೋಗದಲ್ಲಿ ಬಳ್ಳಾರಿಯ ಸಮೃದ್ಧಿ ಫೌಂಡೇಶನ್ ಸದಸ್ಯರೂ ರಾಯಚೂರಿನ ಸ್ವಯಂಸೇವಾ ಸಂಸ್ಥೆಯ ಕಾರ್ಯಕರ್ತರೂ ಹಸಿರು ಭಾನುವಾರ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸುತ್ತಿರುವುದು ಸಂತಸದ ವಿಷಯ.

## ಸಾಪ್ತಾಹಿಕ ಕಾರ್ಯಕ್ರಮಗಳು

ಶ್ರೀ ಚೇತನ ಆನ್ ಲೈನ್ ಕಾರ್ಯಕ್ರಮಗಳು ಪ್ರತಿ ಮಂಗಳವಾರದಂದು ನಡೆಯುತ್ತಿದ್ದು ಪ್ರತಿ ವಾರ ದೇಶಭಕ್ತಿ ಗೀತೆ, ಮಂಕುತಿಮ್ಮನ ಕಗ್ಗ ವಾಚನ, ಔಷಧೀಯ ಸಸ್ಯ ಪರಿಚಯ, ಆರೋಗ್ಯ ಅಡುಗೆ ಮೊದಲಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಗುತ್ತಿದೆ. ಅದಮ್ಯ ಚೇತನದಲ್ಲಿ ಪ್ರತಿ ಗುರುವಾರ ಸಂಜೆ ಒಂದು ಗಂಟೆಯ ಅವಧಿಯಲ್ಲಿ ಗೀತಾಪಠನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಭಗವದ್ಗೀತೆಯ ಪಠನದ ನಂತರ ಕಾರ್ಯಕರ್ತರು ತರಕಾರಿ ಹೆಚ್ಚುವ ಕೆಲಸದಲ್ಲಿ ಕೈಜೋಡಿಸುವ ಮೂಲಕ ಅದಮ್ಯಚೇತನದ ಅಡುಗೆಮನೆಯ ಕಾರ್ಯದಲ್ಲಿ ನೆರವಾಗುತ್ತಿದ್ದಾರೆ.



## ಕಲಬುರ್ಗಿಯಲ್ಲಿ ಹೊಸ ಪಾಕಶಾಲೆ

ಕಲಬುರ್ಗಿಯಲ್ಲಿ ಅದಮ್ಯಚೇತನದ ಹೊಸ ಸುವ್ಯವಸ್ಥಿತ ಅಡುಗೆಮನೆಯನ್ನು ಸ್ಥಾಪಿಸಲಾಗಿದೆ. ಇತ್ತೀಚೆಗೆ ಈ ಅಡುಗೆಮನೆಯ ಆವರಣದಲ್ಲಿ ಪೂಜಾವಿಧಿಗಳನ್ನು ನಡೆಸಿ ಕಾರ್ಯಾರಂಭಮಾಡಲಾಯಿತು.

## ಪೌರಕಾರ್ಮಿಕರಿಗೆ ಆಹಾರ ಪೂರೈಕೆ

ಅದಮ್ಯ ಚೇತನವು ಪ್ರತಿ ನಿತ್ಯ ಬೆಂಗಳೂರಿನ ಸಾವಿರಾರು ಪೌರಕಾರ್ಮಿಕರಿಗೆ ಆಹಾರವನ್ನು ಒದಗಿಸುವ ಕರ್ತವ್ಯದಲ್ಲಿ ತೊಡಗಿಕೊಂಡಿದ್ದು, ನಗರದ 300 ಕೇಂದ್ರಗಳ ಮೂಲಕ ಪ್ರತಿದಿನ ಹದಿನಾಲ್ಕು ಸಾವಿರ ಪೌರಕಾರ್ಮಿಕರಿಗೆ ಆಹಾರವನ್ನು ಪೂರೈಸುವ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅದಮ್ಯ ಚೇತನ ಯಶಸ್ವಿಯಾಗಿದೆ.

## ಅನ್ನದಾನ

ಅದಮ್ಯಚೇತನ ವತಿಯಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುತ್ತಿದ್ದು ಪ್ರತಿದಿನ ನೂರಾರು ಜನರು ಮಧ್ಯಾಹ್ನದ ಊಟದ ಸೌಲಭ್ಯ ಪಡೆಯುತ್ತಿದ್ದಾರೆ. ಗವಿಪುರ, ಜಯನಗರ, ಜೆ.ಪಿ ನಗರ, ನಗರ್ತಪೇಟೆ, ಮೊದಲಾದ ಕಡೆಗಳಲ್ಲಿ ಅಗತ್ಯವಿರುವ ಜನರು ರುಚಿಕರವಾದ ಭೋಜನ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಬೇಸಿಗೆ ರಜೆ ಮುಗಿದು ಶಾಲಾಕಾಲೇಜುಗಳು ಆರಂಭವಾಗಿದ್ದು ಅಕ್ಷರದಾಸೋಹದ ಅಂಗವಾಗಿ ದಿನನಿತ್ಯ ಸಾವಿರಾರು ಮಕ್ಕಳಿಗೆ ಕುಡಿಯುವ ಹಾಲು, ಮಧ್ಯಾಹ್ನದ ಬಿಸಿಯೂಟವನ್ನು ವಿತರಿಸಲಾಗುತ್ತಿದೆ. ಸೌತ್ ಎಂಡ್ ವೃತ್ತದ ಅನಂತ ಪ್ರೇರಣಾ ಕೇಂದ್ರದಲ್ಲಿ ಅಗತ್ಯವಿರುವ ಕಾಲೇಜು ವಿದ್ಯಾರ್ಥಿಗಳಿಗೆ ದಿನನಿತ್ಯ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿದೆ.

ಅನಂತಪಥ

Editor: **Gopal T.S** I Assistance: **K. Janardhana Thunga** I Layout: **Ananthakumar Pratishthana**

**Assistance: Sanjay R / Trivikram Joshi**

Inputs: **Poornaprajna I Sreelakshmi Vishwanath I Chaya Bapat I Srikanth K I Pradeep Oak**

Photographs: **Venkatesh Murthy I Adamya Chethana I Gopal TS I Chakrapani Kengeri I Internet Sources**

Printed at: **Rashtrothana Mudranalaya, Chamrajpet, Bengaluru**

Published by: **Dr. Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ

To get a e-version of this periodical SMS your name and place to 8884182415

# ಅದಮ್ಯ ಸೇವಾ

( ಅದಮ್ಯ ಚೇತನ -ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ISEC ಆವರಣದಲ್ಲಿ ಪದ್ಮಶ್ರೀ ಸಾಲುಮರದ ತಿಮ್ಮಕ್ಕನವರೊಡನೆ ಸಸಿ ನೆಡುವ ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತ ಕುಮಾರ್ ಅವರು ಪಾಲ್ಗೊಂಡಿದ್ದರು.



ವಿಶ್ವಪರಿಸರದಿನದ ಅಂಗವಾಗಿ ಹಸಿರು ಭಾನುವಾರದಂದು ಅದಮ್ಯಚೇತನದ ವತಿಯಿಂದ 500 ಸಸಿಗಳನ್ನು ನೆಡಲಾಯಿತು.



ಅನಂತಪ್ರೇರಣಾಕೇಂದ್ರಕ್ಕೆ ಶಾಲಾಕಾಲೇಜು ವಿದ್ಯಾರ್ಥಿಗಳ ಭೇಟಿ



ಯಲಹಂಕದ ಗಾಲಿ ಮತ್ತು ಅಚ್ಚು ಕಾರ್ಖಾನೆಯ ಆವರಣದಲ್ಲಿ ಸಂಸ್ಥೆಯ ಅಧಿಕಾರಿಗಳ ಸಮ್ಮುಖದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರರವರು ಶ್ರೀ ಅನಂತಕುಮಾರ್ ಅವರ ಸ್ಮರಣಾರ್ಥ ಸಸ್ಯವೊಂದನ್ನು ನೆಟ್ಟರು



ನಗರ್ತಪೇಟೆಯ ನಗರೇಶ್ವರ ದೇವಾಲಯದ ಆವರಣದಲ್ಲಿ ಅದಮ್ಯಚೇತನದ ಆಶ್ರಯದಲ್ಲಿ ನಡೆಯುತ್ತಿರುವ ನಿತ್ಯ ಅನ್ನದಾನದ ವಾರ್ಷಿಕೋತ್ಸವ ಇತ್ತೀಚೆಗೆ ಜರುಗಿತು.




ಅದಮ್ಯ ಚೇತನದಲ್ಲಿ ನಡೆಯುತ್ತಿರುವ ಭಗವದ್ಗೀತೆಯ ಪಠಣದ ಸಮಾರೋಪದಲ್ಲಿ ಕಣ್ಣೂರು ಆಶ್ರಮದ ಶ್ರೀ ಕೃಷ್ಣ ಗುರೂಜಿಯವರು ಉಪಸ್ಥಿತರಿದ್ದು, ಉಪನ್ಯಾಸ ನೀಡಿದರು.

## ಅನಂತ ಚಿತ್ರಸಂಪುಟ

ಜನಪರವಾದ ಕಾರ್ಯಕ್ರಮಗಳು ಯಾವುವೇ ಇರಲಿ, ಎಲ್ಲೇ ಆಗಲಿ ಅನಂತಕುಮಾರ್ ತಾವೂ ಜನರ ಸಂಭ್ರಮದಲ್ಲಿ ಸೇರಿಕೊಳ್ಳಲು ಉತ್ಸಾಹದಿಂದ ಮುಂದಾಗುತ್ತಿದ್ದರು. ಧಾರ್ಮಿಕ ಸಮಾರಂಭ, ಸಾಂಸ್ಕೃತಿಕ ಚಟುವಟಿಕೆ, ಪರಿಸರಕ್ಕೆ ಪೂರಕವಾದ ಕಾರ್ಯಕ್ರಮ- ಎಲ್ಲದರಲ್ಲೂ ಅನಂತಕುಮಾರರ ಉಪಸ್ಥಿತಿ ಸ್ಫೂರ್ತಿದಾಯಕವಾಗಿರುತ್ತಿತ್ತು.









